# ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ ಅಧಿನಿಯಮ, 1987

(1987ರ ಅಧಿನಿಯಮ ಸಂಖ್ಯೆ 37)

06.10.2006.ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 34ನೇ ಸಂಪುಟದ 1ನೇ ಸಂಚಿಕೆಯಲ್ಲಿ 79 ರಿಂದ 98ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ – I

### ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯನ್ನು ರಾಷ್ಟ್ರೀಯ ಮಹತ್ವವುಳ್ಳ ಒಂದು ಸಂಸ್ಥೆಯೆಂದು ಘೋಷಿಸುವುದು
3. ಪರಿಭಾಷೆಗಳು

### ಅಧ್ಯಾಯ – II

### ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ

4. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ನಿಗಮನ
5. ಭಾರತದ ಹೈನು ನಿಗಮದ ಉದ್ಯಮಗಳು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಲ್ಲಿ ನಿಹಿತಗೊಳಿಸುವುದು ಮತ್ತು ಭಾರತದ ಹೈನು ನಿಗಮವನ್ನು ವಿಘಟಿಸುವುದು
6. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯನ್ನು ನಿಗಮನಗೊಳಿಸಿದ ಪರಿಣಾಮ
7. ಕಾನೂನು ವ್ಯವಹರಣೆಗಳ ಉಳಿಸುವಿಕೆ

### ಅಧ್ಯಾಯ – III

### ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ವ್ಯವಸ್ಥಾಪನೆ

8. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ವ್ಯವಸ್ಥಾಪನೆ ಮತ್ತು ಅದರ ನಿರ್ದೇಶಕ ಮಂಡಲಿಯ ರಚನೆ
9. ಅಧ್ಯಕ್ಷ ಮತ್ತು ನಿರ್ದೇಶಕರ ಪದಾವಧಿಗಳು ಮತ್ತು ಸೇವಾ ಷರತ್ತುಗಳು ಮುಂತಾದವು
10. ಮಂಡಲಿಯ ಸಭೆಗಳು
11. ಮಂಡಲಿಯ ವ್ಯವಹಾರವನ್ನು ನಡೆಸುವ ರೀತಿ
12. ವ್ಯವಸ್ಥಾಪನಾ ಸಮಿತಿಗಳು
13. ವ್ಯವಸ್ಥಾಪನಾ ಸಮಿತಿಯ ಸದಸ್ಯರ ಭತ್ಯೆಗಳು, ಮುಂತಾದವು
14. ವ್ಯವಸ್ಥಾಪನಾ ಸಮಿತಿ ಇತ್ಯಾದಿಗಳಿಗೆ ಅಧಿಕಾರಗಳ ಪ್ರತ್ಯಾಯೋಜನೆ
15. ಪೂರ್ಣಕಾಲಿಕ ನಿರ್ದೇಶಕರು ಮೊದಲಾದವರಿಗೆ ಅಧಿಕಾರಗಳ ಪ್ರತ್ಯಾಯೋಜನೆ

### ಅಧ್ಯಾಯ– IV

**ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು**

16. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು

## ಅಧ್ಯಾಯ – V

**ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ನಿರ್ದೇಶಕರು ಮತ್ತು ನೌಕರರಿಗೆ ಸಂಬಂಧಿಸಿದ ಉಪಬಂಧಗಳು**

17. ಸಂಘದ ಮಂಡಲಿಯ ಸದಸ್ಯರು ಮತ್ತು ವಿಘಟಿತ ಕಂಪನಿಯ ನಿರ್ದೇಶಕರಿಗೆ ಸಂಬಂಧಪಟ್ಟ ಉಪಬಂಧಗಳು

18. ಸಂಘದ ಮತ್ತು ವಿಘಟಿತ ಕಂಪನಿಯ ಅಧಿಕಾರಿಗಳು ಮತ್ತು ಇತರ ನೌಕರರಿಗೆ ಸಂಬಂಧಪಟ್ಟ ಉಪಬಂಧಗಳು

19. ಕಾರ್ಯನಿರ್ವಹಣೆಯಲ್ಲಿ ಗರಿಷ್ಠ ದಕ್ಷತೆಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಸಂಘಟನಾತ್ಮಕ ಮತ್ತು ಅಧಿಕಾರಾತ್ಮಕ ವ್ಯವಸ್ಥೆಯನ್ನು ಪುನಾರಚಿಸಲು ಮತ್ತು ಆಧುನೀಕರಣಗೊಳಿಸಲು ಮಂಡಲಿಯ ಅಧಿಕಾರ

20. ಅವಶ್ಯಕತೆಗಿಂತ ಹೆಚ್ಚಿಗೆ ಇರುವ ನೌಕರರಿಗೆ ನಷ್ಟ ಪರಿಹಾರ ಮುಂತಾದವುಗಳಿಗೆ ಸಂಬಂಧಪಟ್ಟ ಯೋಜನೆಗಳು

21. ನೌಕರರ ವರ್ಗಾವಣೆಗಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡದಿರುವುದು

22. ಭವಿಷ್ಯನಿಧಿ, ಉಪದಾನ, ಕಲ್ಯಾಣ ನಿಧಿ ಮತ್ತು ಇತರೆ ನಿಧಿಗಳು

## ಅಧ್ಯಾಯ -VI

**ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ**

23. ಸಾಲ ತೆಗೆದುಕೊಳ್ಳಲು ಮಂಡಲಿಯ ಅಧಿಕಾರಗಳು

24. ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು

25. ಅನುದಾನಗಳು, ದೇಣಿಗೆಗಳು ಮುಂತಾದವುಗಳು

26. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ ನಿದಿ

27. ಲೆಕ್ಕಪತ್ರಗಳು ಮತ್ತು ಆಯವ್ಯಯ ಪಟ್ಟಿಯನ್ನು ಸಿದ್ಧಪಡಿಸುವುದು

28. ಲೆಕ್ಕ ಪರಿಶೋಧನೆ

29. ವರದಿಗಳನ್ನು ಸಂಸತ್ತಿನ ಮುಂದೆ ಇಡುವುದು

30. ಒಪ್ಪಿಕೊಂಡ ಅವಧಿಗೆ ಮುಂಚೆ ಮರುಸಂದಾಯ ಮಾಡುವುದಕ್ಕಾಗಿ ಕೋರುವ ಅಧಿಕಾರ

31. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಕ್ಲೇಮುಗಳನ್ನು ಜಾರಿಗೊಳಿಸುವುದಕ್ಕಾಗಿ ವಿಶೇಷ ಉಪಬಂಧಗಳು

## ಅಧ್ಯಾಯ - VII

**ಸಂಕೀರ್ಣ**

32. ನೇಮಕಾತಿಗಳಲ್ಲಿನ ದೋಷಗಳು, ಮಂಡಲಿಯ ಕಾರ್ಯಗಳು, ಮುಂತಾದವುಗಳನ್ನು ಅಸಿಂಧುಗೊಳಿಸದಿರುವುದು

33. ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗೆ ರಕ್ಷಣೆ

34. ನಿರ್ದೇಶಕರಿಗೆ ನಷ್ಟ ಭರ್ತಿ

35. ನಂಬಿಕೆ ಮತ್ತು ರಹಸ್ಯದ ಬಗ್ಗೆ ಬಾಧ್ಯತೆ

36. ಹೆಚ್ಚುವರಿ ಅಧಿಕಾರಿಗಳ ಮತ್ತು ಇತರ ನೌಕರರ ನೌಕರಿ ಭರ್ತಿ

37. ಕೇಂದ್ರ ಸರ್ಕಾರದ ಆದೇಶಗಳ ಮೂಲಕ ಮಾತ್ರವೇ ಸಮಾಪನ

38. ಕೇಂದ್ರ ಸರ್ಕಾರದಿಂದ ಕೆಲವು ಅಧಿಕಾರಗಳ ಪ್ರತ್ಯಾಯೋಜನೆ

39. ಲೆಕ್ಕ ಪರಿಶೋಧಕರಿಗಾಗಿ ಸಂಧಿಕಾಲೀನ ಉಪಬಂಧಗಳು

40. ಅಧ್ಯಕ್ಷ ಮತ್ತು ಮಂಡಲಿಗೆ ಸಂಬಂಧಿಸಿದಂತೆ ಸಂಧಿಕಾಲೀನ ಉಪಬಂಧಗಳು

41. ವ್ಯವಸ್ಥಾಪನೆ ಅಥವಾ ಇತರರಿಗೆ ನೀಡುವ ನೆರವು ಮುಂದುವರಿಯುವುದು

42. ಮದರ್ ಡೈರಿಯು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಸಹಾಯಕ ಘಟಕವಾಗಿರತಕ್ಕದ್ದು

43. ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ಕಂಪನಿಗಳನ್ನು ರಚಿಸುವುದು

**44.** [2002ರ 20ನೇ ಸಂಖ್ಯೆಯ ಅಧಿನಿಯಮದ 162ನೇ ಪ್ರಕರಣದ ಮೂಲಕ ದಿನಾಂಕ: 1ನೇ ಏಪ್ರಿಲ್ 2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.]

45. ವಿವರ ಪಟ್ಟಿಕೆಗಳು

46. ಸೇವಾ ವಿಷಯಗಳಿಗೆ ಸಂಬಂಧಪಟ್ಟಂತೆ ಪೂರ್ವಾನ್ವಯವಾಗಿ ಯೋಜನೆಗಳನ್ನು ಮತ್ತು ವಿನಿಯಮಗಳನ್ನು ರಚಿಸಲು ಅಧಿಕಾರ

47. ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು

48. ವಿನಿಯಮ ರಚನಾಧಿಕಾರ

49. ತೊಂದರೆಗಳನ್ನು ನಿವಾರಿಸುವ ಅಧಿಕಾರ

50. ಯೋಜನೆಗಳು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು

ಅನುಸೂಚಿ

# ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ ಅಧಿನಿಯಮ, 1987

(1987ರ ಅಧಿನಿಯಮ ಸಂಖ್ಯೆ 37)

[15ನೇ ಸೆಪ್ಟೆಂಬರ್ 1987]

ಗುಜರಾತ್ ರಾಜ್ಯದಲ್ಲಿನ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ ಎಂದು ಕರೆಯಲಾಗುತ್ತಿರುವ ಸಂಸ್ಥೆಯನ್ನು ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆ ಎಂದು ಘೋಷಿಸುವ ಮತ್ತು ಅದನ್ನು ನಿಗಮಿತಗೊಳಿಸುವುದಕ್ಕಾಗಿ ಮತ್ತು ಆ ನಿಗಮಿತ ನಿಕಾಯವು ದೇಶದಾದ್ಯಂತ ಹೆಚ್ಚು ಪರಿಣಾಮಕಾರಿಯಾಗಿ ಅಡಳಿತ ನಡೆಸಲು ಮತ್ತು ಅದು ನೆರವೇರಿಸಬೇಕಾದ ಪ್ರಕಾರ್ಯಗಳನ್ನು ನಡೆಸಲು ಉಪಬಂಧ ಕಲ್ಪಿಸುವ ದೃಷ್ಟಿಯಿಂದ ಭಾರತ ಕ್ಷೀರ ನಿಗಮದ ಉದ್ಯಮಗಳನ್ನು ಆ ನಿಗಮಿತ ನಿಕಾಯದಲ್ಲಿ ನಿಹಿತಗೊಳಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಸೊಸೈಟಿಗಳ ನೋಂದಣಿ ಅಧಿನಿಯಮ, 1860 (1860ರ 21)ರ ಮೇರೆಗೆ ರಚಿಸಲಾದ ಮತ್ತು ನೋಂದಾಯಿಸಿದ ಸಂಘವಾದ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಗ್ರಾಮೀಣ ಜನ ಸಮೂಹದ ಆರ್ಥಿಕಾಭಿವೃದ್ಧಿಗಾಗಿ, ಆನಂದ (ಗುಜರಾತ್)ದಲ್ಲಿ ಪರಿಣಾಮಕಾರಿಯಾಗಿಸಿದ ಉಪಾಯ ವಾಗಿರುವ ಸಹಕಾರಿ ವೃತ್ತಿಯನ್ನು ಅಂಗೀಕರಿಸುವ ಮೂಲಕ ದೇಶಕ್ಕೆ ಸೇವೆಯನ್ನು ಸಲ್ಲಿಸುತ್ತಿರುವುದರಿಂದ ಮತ್ತು ಸಹಕಾರಿ ಪ್ರಯತ್ನದ ಮೂಲಕ ಜನರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಅತಿ ಮುಖ್ಯ ಪಾತ್ರವನ್ನು ವಹಿಸುತ್ತಿರುವುದರಿಂದ;

ಮತ್ತು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಉದ್ದೇಶಗಳು ಮತ್ತು ರಾಷ್ಟ್ರೀಯ ಮಹತ್ವದ ಒಂದು ಸಂಸ್ಥೆಯನ್ನಾಗಿಸುವ ಮತ್ತು ಅದನ್ನು ಒಂದು ನಿಗಮಿತ ನಿಕಾಯ ವನ್ನಾಗಿಸುವಂಥದ್ದಾಗಿರುವುದರಿಂದ;

ಮತ್ತು ಕಂಪನಿಗಳ ಅಧಿನಿಯಮ, 1956 (1956ರ 1) ಇದರ ಮೇರೆಗೆ ರಚಿಸಲಾದ ಮತ್ತು ನೋಂದಾಯಿಸಲಾದ ಕಂಪನಿಯಾಗಿರುವ ಭಾರತ ಹೈನುಗಾರಿಕೆ ಅಭಿವೃದ್ಧಿ ನಿಗಮದ ಪ್ರಕಾರ್ಯಗಳು ಮತ್ತು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಪ್ರಕಾರ್ಯಗಳು ಪರಸ್ಪರ ಪೂರಕವಾಗಿರುವ ಮತ್ತು ಸಾಮಾನ್ಯ ಧ್ಯೇಯೋದ್ದೇಶಗಳನ್ನು ಸಾಧಿಸುವ ಗುರಿಯನ್ನು ಹೊಂದಿರುವುದರಿಂದ;

ಮತ್ತು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಗೆ ಇಲ್ಲಿಯವರೆಗೆ ಲಭ್ಯವಿರುವ ಕಾರ್ಯಾಚರಣೆಯ ಸ್ವಾತಂತ್ರ್ಯ ಮತ್ತು ನಮ್ಯತೆಯು ಅದಕ್ಕೆ ಅದರ ಪ್ರಕಾರ್ಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನೆರವೇರಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸುವಲ್ಲಿ ವ್ಯಾಪಕ ಮತ್ತು ಹೆಚ್ಚು ಮಹತ್ವವುಳ್ಳ ಪಾತ್ರವನ್ನು ವಹಿಸಲು ಸಾಧ್ಯಗೊಳಿಸುವ ಹಾಗೆ ಮುಂದುವರಿಯಬೇಕಾದುದು ಅವಶ್ಯಕವಾಗಿರುವುದರಿಂದ;

ಮತ್ತು ಹೆಚ್ಚು ಪರಿಣಾಮಕಾರಿಯಾಗಿ ನಿಗಮಿತ ನಿಕಾಯದ ಆಡಳಿತಕ್ಕಾಗಿ ಮತ್ತು ಅದು ನೆರವೇರಿಸಬೇಕಾದ ಪ್ರಕಾರ್ಯಗಳನ್ನು ಮುಂದುವರೆಸುವುದಕ್ಕಾಗಿ ಉಪಬಂಧಿಸುವ ದೃಷ್ಟಿಯಿಂದ ಭಾರತ ಕ್ಷೀರ ನಿಗಮದ ಉದ್ಯಮಗಳನ್ನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಲ್ಲಿ ನಿಹಿತಗೊಳಿಸುವುದು ಅವಶ್ಯವೆಂದು ಪರ್ಯಾಲೋಚಿಸಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

## ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ ಅಧಿನಿಯಮ, 1987 ಎಂದು ಕರೆಯತಕ್ಕದ್ದು.

(2) ಇದು ಕೇಂದ್ರ ಸರ್ಕಾರವು ಸರ್ಕಾರಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯನ್ನು ರಾಷ್ಟ್ರೀಯ ಮಹತ್ವವುಳ್ಳ ಒಂದು ಸಂಸ್ಥೆಯೆಂದು ಘೋಷಿಸುವುದು.**- ಗುಜರಾತ್ ರಾಜ್ಯದಲ್ಲಿನ ಆನಂದ್‌ನಲ್ಲಿರುವ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಉದ್ದೇಶಗಳು ಆ ಸಂಸ್ಥೆಯನ್ನು ರಾಷ್ಟ್ರೀಯ ಮಹತ್ವವುಳ್ಳ ಸ ಂಸ್ಥೆಯನ್ನಾಗಿ ಮಾಡುವಂಥವುಗಳು ಆಗಿರುವುದರಿಂದ, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯನ್ನು ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆ ಎಂದು ಈ ಮೂಲಕ ಘೋಷಿಸಲಾಗಿದೆ.

3. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಗೊತ್ತುಪಡಿಸಿದ ದಿವಸ" ಎಂದರೆ, ಈ ಅಧಿನಿಯಮದ ಪ್ರಾರಂಭದ ದಿನಾಂಕ;

(ಬಿ) "ಮಂಡಲಿ" ಎಂದರೆ, ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ನಿರ್ದೇಶಕರ ಮಂಡಲಿ;

(ಸಿ) "ಅಧ್ಯಕ್ಷ" ಎಂದರೆ, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಅಧ್ಯಕ್ಷ;

(ಡಿ) "ಕಂಪನಿಗಳ ಅಧಿನಿಯಮ" ಎಂದರೆ, ಕಂಪನಿಗಳ ಅಧಿನಿಯಮ, 1956;

(ಇ) "ನಿರ್ದೇಶಕ" ಎಂದರೆ, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ನಿರ್ದೇಶಕ ಮತ್ತು ಅದರಲ್ಲಿ ಅಧ್ಯಕ್ಷನೂ ಒಳಗೊಳ್ಳುತ್ತಾನೆ;

(ಎಫ್) "ಆಹಾರ ಪದಾರ್ಥಗಳು" ಎಂದರೆ, ಅತ್ಯಾವಶ್ಯಕ ಸರಕುಗಳ ಅಧಿನಿಯಮ, 1955ರ 2ನೇ ಪ್ರಕರಣದ (ಎ) ಖಂಡದಲ್ಲಿ ಒಳಗೊಂಡಿರುವ ಅತ್ಯಾವಶ್ಯಕ ಸರಕುಗಳ ಪರಿಭಾಷೆಯಲ್ಲಿ ಸೇರಿಸಲಾಗಿರುವಂಥ ಆಹಾರ ಪದಾರ್ಥಗಳು;

(ಜಿ) "ಭಾರತದ ಹೈನುಗಾರಿಕೆ ನಿಗಮ" ಎಂದರೆ, ಕಂಪನಿಗಳ ಅಧಿನಿಯಮದ ಮೇರೆಗೆ ರಚಿಸಲಾದ ಮತ್ತು ನೋಂದಾಯಿಸಲಾದ ಮತ್ತು ಗುಜರಾತ್ ರಾಜ್ಯದ ಬರೋಡದಲ್ಲಿ ತನ್ನ ನೋಂದಾಯಿತ ಕಛೇರಿಯನ್ನು ಹೊಂದಿರುವ ಕಂಪನಿಯಾದ ಭಾರತದ ಹೈನುಗಾರಿಕೆ ನಿಗಮ;

(ಎಚ್) "ಹಾಲಿನ ಉತ್ಪನ್ನ" ಎಂದರೆ,-

(i) ಕ್ರಿಮಿ ಶುದ್ಧಿಗೊಳಿಸಿದ, ಪ್ರಮಾಣ ನಿಗದಿಮಾಡಿದ, ಪುನಃ ಸಂಯೋಜಿಸಿದ, ಸಂಸ್ಕರಿಸಿದ, ಇಮ್ಮಡಿ ಸಂಸ್ಕರಿಸಿದ, ಕೆನೆಯನ್ನು ತೆಗೆದ, ರುಚಿಗಟ್ಟಿಸಿದ ಅಥವಾ ಹುಳಿಗಟ್ಟಿಸಿದ ಹಾಲು;

(ii) ಐಸ್‌ಕ್ರೀಂ;

(iii) ಕೆನೆ;

(iv) ಗಿಣ್ಣು;

(v) ಬೆಣ್ಣೆ;

(vi) ಹಾಲಿನ ಪುಡಿ;

(vii) ತಾಯಿ ಹಾಲು ಬಿಡಿಸುವ ಹಾಲುಮಿಶ್ರಿತ ಆಹಾರಗಳು ಮತ್ತು ಶಿಶು ಹಾಲಿನ ಆಹಾರಗಳು;

(viii) ಕೋಕೋ ಪುಡಿಯೊಂದಿಗೆ ಅಥವಾ ಅದಿಲ್ಲದೆ ಮಾಲ್ಟ್‌ಯುಕ್ತ ಹಾಲಿನ ಆಹಾರಗಳು;

(ix) ತುಪ್ಪ;

(x) ಶುಷ್ಕ ಹಾಲಿನ ಕೊಬ್ಬು ಮತ್ತು ದ್ರವರೂಪಿ ಬೆಣ್ಣೆ ;

(xi) ಪನೀರ್ (ಕೆಸೀನ್);

(xii) ಹಾಲನ್ನು ಒಳಗೊಂಡಿರುವ ಇತರ ಯಾವುದೇ ಉತ್ಪನ್ನ ಅಥವಾ ಕೇಂದ್ರ ಸರ್ಕಾರವು ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸ ಬಹುದಾದಂಥ ಮೇಲೆ ನಮೂದಿಸಿದ ಎಲ್ಲ ಹಾಲು ಉತ್ಪನ್ನಗಳು ಅಥವಾ ಆ ಪೈಕಿ ಯಾವುದೇ ಉತ್ಪನ್ನಗಳು;

(ಐ) "ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ" ಎಂದರೆ, 4ನೇ ಪ್ರಕರಣದ ಮೇರೆಗೆ ನಿಗಮಿತಗೊಳಿಸಲಾದ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ;

(ಜೆ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳಿಂದ ನಿಯಮಿಸಲಾದುದು;

(ಕೆ) ರಾಷ್ಟ್ರೀಯ ಹೈನುಹಾರಿಕೆ ಅಭಿವೃದ್ಧಿ ಮಂಡಲಿಯ ಸಂಘಟನಾತ್ಮಕ ಮತ್ತು ಪ್ರಕಾರ್ಯಾತ್ಮಕ ವ್ಯವಸ್ಥೆಗೆ ಸಂಬಂಧಪಟ್ಟಂತೆ "ಪುನಾರಚನೆ ಮತ್ತು ಆಧುನೀಕರಣ" ಎಂಬುದು ಈ ಕೆಳಕಂಡವುಗಳನ್ನು ಒಳಗೊಳ್ಳುತ್ತದೆ,-

(i) ಘಟಕಗಳು ಅಥವಾ ಕಚೇರಿಗಳನ್ನು ತೆರೆಯುವುದು ಅಥವಾ ಮುಚ್ಚುವುದು;

(ii) ಸಂಘಟನಾತ್ಮಕ ಮತ್ತು ಪ್ರಕಾರ್ಯಾತ್ಮಕ ವ್ಯವಸ್ಥೆಯ ಪರಿಷ್ಕರಣೆ;

(iii) ಅಗತ್ಯವಾದ ಸಿಬ್ಬಂದಿಯ ಬಗ್ಗೆ ನಿರೂಪಣೆ ;

(iv) ಹುದ್ದೆಗಳ ಸಮನ್ವಯತೆ, ಜೇಷ್ಠತೆ ಮತ್ತು ವೇತನ ಶ್ರೇಣಿಗಳನ್ನು ನಿಗದಿಪಡಿಸುವುದು;

(v) ಪರಿಷ್ಕೃತ ವ್ಯವಸ್ಥೆಯಲ್ಲಿ ಅಗತ್ಯವಾದ ಸಿಬ್ಬಂದಿಯ ಸಮನ್ವಯತೆ ಮತ್ತು ಈ ಬಗ್ಗೆ ನೇಮಕಾತಿ ಆದೇಶಗಳನ್ನು ಹೊರಡಿಸುವುದು;

(vi) ಹುದ್ದೆಗಳಿಗೆ ಅನ್ವಯಿಸುವ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಬಗ್ಗೆ ನಿರೂಪಣೆ ಅಥವಾ ಅವುಗಳ ವ್ಯಾಪ್ತಿಗಳ ನಿರ್ಧಾರ ;

(vii) ಒಂದು ಮತ್ತೊಂದಕ್ಕೆ ತತ್ಸಮಾನವಾದ ಹುದ್ದೆಗಳ ನಿರೂಪಣೆ; ಮತ್ತು

(viii) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಸಂಘಟನಾತ್ಮಕ ಅಥವಾ ಪ್ರಕಾರ್ಯಾತ್ಮಕ ಅವಶ್ಯಕತೆಗಳನ್ನು ಪೂರೈಸಲು ಅವಶ್ಯಕ ಅಥವಾ ಪ್ರಾಸಂಗಿಕವಾಗಬಹುದಾದಂಥ ಇತರ ಯಾವುದೇ ವಿಷಯ.

(ಎಲ್) "ಸಂಘ" ಎಂದರೆ, ಸೊಸೈಟಿಗಳ ನೋಂದಣಿ ಅಧಿನಿಯಮ, 1860 (1860ರ 21) ಇದರ ಮೇರೆಗೆ ರಚಿಸಲಾದ ಮತ್ತು ನೋಂದಾಯಿತ ಸಂಘವಾಗಿರುವ ಮತ್ತು ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ ಹಾಗೆಂದು ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ;

(ಎಂ) ಇದರಲ್ಲಿ ಉಪಯೋಗಿಸಿರುವ ಮತ್ತು ಪರಿಭಾಷಿಸಿಲ್ಲದ ಆದರೆ ಕಂಪನಿ ಅಧಿನಿಯಮದಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೆ ಹೊಂದಿರುತ್ತವೆ.

## ಅಧ್ಯಾಯ – II

## ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ

**4. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ನಿಗಮನ.–** (1) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯನ್ನು ಅದೇ ಹೆಸರಿನಿಂದ ಒಂದು ನಿಗಮಿತ ನಿಕಾಯವನ್ನಾಗಿ ಈ ಮೂಲಕ ರಚಿಸಲಾಗಿದೆ ಮತ್ತು ಅದು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೇ ಮಾಡುವ ಮತ್ತು ಕರಾರು ಮಾಡಿಕೊಳ್ಳುವ, ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಆ ಹೆಸರಿನಲ್ಲಿ ಅದು ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(2) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಪ್ರಧಾನ ಕಚೇರಿಯು ಗುಜರಾತ್ ರಾಜ್ಯದ ಆನಂದದಲ್ಲಿರತಕ್ಕದ್ದು.

(3) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು, ಅದು ಭಾರತದಲ್ಲಿ ಅಥವಾ ಅದರ ಹೊರಗಡೆ ತಾನು ಅಗತ್ಯವೆಂದು ಪರ್ಯಾಲೋಚಿಸುವಂಥ ಯಾವುದೇ ಅಂಥ ಸ್ಥಳದಲ್ಲಿ ಘಟಕಗಳು, ಕಚೇರಿಗಳು, ಶಾಖೆಗಳು ಅಥವಾ ಏಜೆನ್ಸಿಗಳನ್ನು ಸ್ಥಾಪಿಸಬಹುದು.

**5. ಭಾರತದ ಹೈನು ನಿಗಮದ ಉದ್ಯಮಗಳು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಲ್ಲಿ ನಿಹಿತಗೊಳಿಸುವುದು ಮತ್ತು ಭಾರತದ ಹೈನು ನಿಗಮವನ್ನು ವಿಘಟಿಸುವುದು.–** (1) ಗೊತ್ತುಪಡಿಸಿದ ದಿವಸದಂದು ಮತ್ತು ಆ ದಿವಸದಿಂದ, ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಭಾರತದ ಹೈನು ನಿಗಮದ ಎಲ್ಲಾ ಉದ್ಯಮಗಳು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಗೆ ವರ್ಗಾವಣೆಯಾಗಿರತಕ್ಕದ್ದು ಮತ್ತು ಅದರಲ್ಲಿ ನಿಹಿತಗೊಂಡಿರತಕ್ಕದ್ದು.

(2) ಕಂಪನಿಗಳ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಭಾರತದ ಹೈನುಗಾರಿಕೆ ನಿಗಮವು ಗೊತ್ತುಪಡಿಸಿದ ದಿವಸದಂದು ಮತ್ತು ಆ ದಿವಸದಿಂದ, ಈ ಅಧಿನಿಯಮದ ಉಪಬಂಧಗಳ ಕಾರಣ ದಿಂದಾಗಿ ವಿಘಟಿತವಾಗಿರತಕ್ಕದ್ದು.

**6. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯನ್ನು ನಿಗಮನಗೊಳಿಸಿದ ಪರಿಣಾಮ.–** ಗೊತ್ತುಪಡಿಸಿದ ದಿವಸದಂದು ಮತ್ತು ಆ ದಿವಸದಿಂದ,–

(ಎ) ಸಂಘದ ಮತ್ತು ಭಾರತದ ಹೈನುಗಾರಿಕೆ ನಿಗಮದ (ಇನ್ನು ಮುಂದೆ ವಿಘಟಿಸಿದ ಕಂಪನಿ ಎಂದು ಉಲ್ಲೇಖಿಸಲಾಗಿದೆ) ಭಾರತದ ಹೈನುಗಾರಿಕೆ ನಿಗಮ ಅಥವಾ ಅದಕ್ಕೆ ಸೇರಿದ ಎಲ್ಲಾ ಚರ ಹಾಗೂ ಸ್ಥಿರ ಸ್ವತ್ತುಗಳು ಮತ್ತು ಆಸ್ತಿಗಳು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದು;

(ಬಿ) ಸಂಘದ ಮತ್ತು ಭಾರತದ ಹೈನುಗಾರಿಕೆ ನಿಗಮದ ಎಲ್ಲಾ ಹಕ್ಕುಗಳು, ಋಣಗಳು, ಹೊಣೆಗಳು, ಹಿತಾಸಕ್ತಿಗಳು, ವಿಶೇಷ ಅಧಿಕಾರಗಳು ಮತ್ತು ಬಾಧ್ಯತೆಗಳು, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಗೆ ವರ್ಗಾವಣೆಯಾಗಿರತಕ್ಕದ್ದು ಮತ್ತು ಅದರ ಹಕ್ಕುಗಳು, ಹೊಣೆಗಳು, ಹಿತಾಸಕ್ತಿಗಳು, ಮತ್ತು ವಿಶೇಷ ಅಧಿಕಾರಗಳು ಮತ್ತು ಬಾಧ್ಯತೆಗಳಾಗಿರತಕ್ಕದ್ದು;

(ಸಿ) (ಬಿ) ಖಂಡದ ಉಪಬಂಧಗಳಿಗೆ ಬಾಧಕವಾಗದಂತೆ ಅವುಗಳ ಉದ್ದೇಶಗಳಿಗಾಗಿ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಗೊತ್ತುಪಡಿಸಿದ ದಿವಸಕ್ಕೆ ನಿಕಟ ಪೂರ್ವದಲ್ಲಿ ಆ ಸಂಘ ಅಥವಾ ವಿಘಟಿತಗೊಂಡ ಕಂಪನಿಯಿಂದ ಅದರೊಂದಿಗೆ ಅಥವಾ ಅದಕ್ಕಾಗಿ ವಹಿಸಲಾದ ಎಲ್ಲಾ ಸಾಲಗಳು, ಋಣಗಳು, ಹೊಣೆಗಳು ಮತ್ತು ಬಾಧ್ಯತೆಗಳು, ಮಾಡಿಕೊಂಡ ಎಲ್ಲಾ ಕರಾರುಗಳು ಮತ್ತು ಮಾಡಬೇಕೆಂದು ಒಪ್ಪಿಕೊಂಡ ಎಲ್ಲಾ ವಿಷಯಗಳು ಅಥವಾ ಕಾರ್ಯಗಳನ್ನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಿಂದ, ಅದರೊಂದಿಗೆ, ಅಥವಾ ಅದಕ್ಕಾಗಿ, ವಹಿಸಲಾಗಿದೆ, ಮಾಡಿಕೊಳ್ಳಲಾಗಿದೆ ಅಥವಾ ಮಾಡಬೇಕೆಂದು ಒಪ್ಪಿಕೊಳ್ಳಲಾಗಿದೆ;

(ಡಿ) ಗೊತ್ತುಪಡಿಸಿದ ದಿವಸಕ್ಕೆ ನಿಕಟ ಪೂರ್ವದಲ್ಲಿ ಸಂಘ ಮತ್ತು ವಿಘಟಿಸಿದ ಕಂಪನಿಗೆ ಬಾಕಿಯಾದ ಹಣದ ಎಲ್ಲಾ ಮೊತ್ತಗಳು ಮಂಡಲಿಗೆ ಬಾಕಿಯಾಗಿರುವವೆಂದು ಭಾವಿಸತಕ್ಕದ್ದು;

(ಇ) ಸಂಘ ಮತ್ತು ವಿಘಟಿಸಿದ ಕಂಪನಿಯ ಪ್ರತಿಯೊಂದು ಸಹಾಯಕ ಸಂಘ ಅಥವಾ ಸಹಾಯಕ ಕಂಪನಿಯ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಸಹಾಯಕ ಸಂಘ ಅಥವಾ ಸಹಾಯಕ ಕಂಪನಿಯಾಗತಕ್ಕದ್ದು;

(ಎಫ್) ಗೊತ್ತುಪಡಿಸಿದ ದಿವಸಕ್ಕೆ ನಿಕಟ ಪೂರ್ವದಲ್ಲಿ ಸಂಘದಿಂದ ಅಥವಾ ಸಂದರ್ಭಾನುಸಾರ, ವಿಘಟಿಸಿದ ಕಂಪನಿಯಿಂದ ವ್ಯವಸ್ಥಾಪನೆ ಮಾಡುತ್ತಿದ್ದಂಥ ಪ್ರತಿಯೊಂದು ಸಂಘಟನೆಯನ್ನು ಸಂದರ್ಭಗಳು ಅಗತ್ಯಪಡಿಸಬಹುದಾದಂಥ ಅವಧಿಗಾಗಿ, ಅಷ್ಟರಮಟ್ಟಿಗೆ ಮತ್ತು ಅಂಥ ರೀತಿಯಲ್ಲಿ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ವ್ಯವಸ್ಥಾಪನೆ ಮಾಡತಕ್ಕದ್ದು;

(ಜಿ) ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ ಸಂಘದಿಂದ ಅಥವಾ ವಿಘಟಿಸಿದ ಕಂಪನಿಯಿಂದ ಹಣಕಾಸು, ವ್ಯವಸ್ಥಾಪನೆ, ಅಥವಾ ತಾಂತ್ರಿಕ ಸಹಾಯವನ್ನು ಪಡೆಯುತ್ತಿದ್ದಂಥ ಪ್ರತಿಯೊಂದು ಸಂಘಟನೆಗೆ, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಗಾಗಿ ಅಷ್ಟರಮಟ್ಟಿಗೆ ಮತ್ತು ಅಂಥ ರೀತಿಯಲ್ಲಿ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಿಂದ, ಹಣಕಾಸು, ವ್ಯವಸ್ಥಾಪನೆ ಅಥವಾ ಸಂದರ್ಭಾನುಸಾರ ತಾಂತ್ರಿಕ ಸಹಾಯ ಕೊಡುವುದನ್ನು ಮುಂದುವರಿಸಬಹುದು;

(ಎಚ್) ವಿಘಟಿಸಿದ ಕಂಪನಿಯ ಬಂಡವಾಳವನ್ನು ಪ್ರತಿನಿಧಿಸುವ ಮೊಬಲಗು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ನಿಧಿಗಳ ಭಾಗವಾಗತಕ್ಕದ್ದು;

(ಐ) ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ಕರಾರಿನಲ್ಲಿ ಅಥವಾ ಇತರ ಲಿಖಿತದಲ್ಲಿ ಆ ಸಂಘಕ್ಕೆ ಅಥವಾ ಸಂದರ್ಭಾನುಸಾರ ವಿಘಟಿತ ಕಂಪನಿಗೆ ಮಾಡಿದ ಯಾವುದೇ ಉಲ್ಲೇಖವನ್ನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಗೆ ಮಾಡಿದ ಉಲ್ಲೇಖವೆಂದು ಭಾವಿಸತಕ್ಕದ್ದು.

7. **ಕಾನೂನು ವ್ಯವಹರಣೆಗಳ ಉಳಿಸುವಿಕೆ.**- ಗೊತ್ತುಪಡಿಸಿದ ದಿವಸದಂದು, ಸಂಘದ ಅಥವಾ ವಿಘಟಿತ ಕಂಪನಿಯ ಅಥವಾ ಅದರ ವಿರುದ್ಧ ಯಾವುದೇ ದಾವೆ, ಮಧ್ಯಸ್ಥಿಕೆ, ಅಪೀಲು ಅಥವಾ ಯಾವುದೇ ಸ್ವರೂಪದ ಇತರ ಕಾನೂನು ವ್ಯವಹರಣೆಯು ಇತ್ಯರ್ಥದಲ್ಲಿದ್ದರೆ, ಅದು, 4ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯನ್ನು ನಿಗಮನಗೊಳಿಸಿದ ಅಥವಾ ಸಂದರ್ಭಾನುಸಾರ, 5ನೇ ಪ್ರಕರಣದ ಮೇರೆಗೆ ಭಾರತದ ಹೈನುಗಾರಿಕೆ ನಿಗಮವನ್ನು ವಿಘಟಿಸಿದ ಕಾರಣದಿಂದಾಗಿ ಕೊನೆಗೊಳ್ಳತಕ್ಕದ್ದಲ್ಲ, ಅದನ್ನು ಮುಂದುವರಿಸತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಪ್ರತಿಕೂಲಕರವಾಗಿ ಬಾಧಕವಾಗತಕ್ಕದ್ದಲ್ಲ, ಆದರೆ, ಆ ದಾವೆ, ಮಧ್ಯಸ್ಥಿಕೆ, ಅಪೀಲು ಅಥವಾ ಇತರ ವ್ಯವಹರಣೆಯನ್ನು, ಈ ಅಧಿನಿಯಮವನ್ನು ಅಂಗೀಕರಿಸಿಲ್ಲದಿದ್ದರೆ, ಸಂದರ್ಭಾನುಸಾರ, ಆ ಸಂಘವು ಅಥವಾ ವಿಘಟಿತ ಕಂಪನಿಯು ಅಥವಾ ಅದರ ವಿರುದ್ಧ ಅದನ್ನು ಹೇಗೆ ಮುಂದುವರಿಸುತ್ತಿತ್ತೋ, ಮುಂದುವರಿಸಲಾಗುತ್ತಿತ್ತೋ, ಪ್ರಾಸಿಕ್ಯೂಟ್‌ಮಾಡುತ್ತಿತ್ತೋ, ಮಾಡಲಾಗುತ್ತಿತ್ತೋ ಮತ್ತು ಜಾರಿ ಗೊಳಿಸುತ್ತಿತ್ತೋ, ಜಾರಿಗೊಳಿಸಲಾಗುತ್ತಿತ್ತೋ ಅಥವಾ ಮುಂದುವರಿಸಬಹುದಾಗಿತ್ತೋ, ಪ್ರಾಸಿಕ್ಯೂಟ್ ಮಾಡಬಹುದಾಗಿತ್ತೋ ಅಥವಾ ಜಾರಿಗೊಳಿಸಬಹುದಾಗಿತ್ತೋ ಅದೇ ರೀತಿಯಲ್ಲಿ ಮತ್ತು ಅಷ್ಟರಮಟ್ಟಿಗೆ, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಅಥವಾ ಅದರ ವಿರುದ್ಧ ಮುಂದುವರಿಸಬಹುದು, ಪ್ರಾಸಿಕ್ಯೂಟ್ ಮಾಡಬಹುದು ಅಥವಾ ಜಾರಿಗೊಳಿಸಬಹುದು.

## ಅಧ್ಯಾಯ – III

## ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ವ್ಯವಸ್ಥಾಪನೆ

8. **ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ವ್ಯವಸ್ಥಾಪನೆ ಮತ್ತು ಅದರ ನಿರ್ದೇಶಕ ಮಂಡಲಿಯ ರಚನೆ.**- (1) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಕಾರ್ಯಕಲಾಪಗಳು ಮತ್ತು ವ್ಯವಹಾರದ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ, ನಿಯಂತ್ರಣ ಮತ್ತು ವ್ಯವಸ್ಥಾಪನೆಯು ಒಂದು ನಿರ್ದೇಶಕ ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದು ಮತ್ತು ಅದು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಚಲಾಯಿಸಬಹುದಾದಂಥ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅದು ಮಾಡಬಹುದಾದಂಥ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡತಕ್ಕದ್ದು.

(2) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ನಿರ್ದೇಶಕ ಮಂಡಲಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು. ಎಂದರೆ,-

(ಎ) ಅಧ್ಯಕ್ಷ ;

(ಬಿ) ಕೇಂದ್ರ ಸರ್ಕಾರದ ಅಧಿಕಾರಿಗಳ ಪೈಕಿ ಒಬ್ಬ ನಿರ್ದೇಶಕ;

(ಸಿ) ರಾಜ್ಯ ಸಹಕಾರಿ ಹೈನುಗಾರಿಕೆ ಮಹಾಮಂಡಲದ ಅಧ್ಯಕ್ಷರ ಪೈಕಿ ಇಬ್ಬರು ನಿರ್ದೇಶಕರು;

(ಡಿ) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಅತ್ಯುನ್ನತ ಶ್ರೇಣಿಯ ಕಾರ್ಯನಿರ್ವಾಹಕರ ಪೈಕಿ ಮೂವರಿಗಿಂತ ಹೆಚ್ಚಿಲ್ಲದ ಪೂರ್ಣಕಾಲಿಕ ನಿರ್ದೇಶಕರು;

(ಇ) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಹೊರಗಡೆಯಿಂದ ತಜ್ಞನಾಗಿರುವ ಒಬ್ಬ ನಿರ್ದೇಶಕ;

(3) (2)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿದ ಅಧ್ಯಕ್ಷ ಮತ್ತು ನಿರ್ದೇಶಕನನ್ನು ಕೇಂದ್ರ ಸರ್ಕಾರವು ನಾಮನಿರ್ದೇಶಿಸತಕ್ಕದ್ದು ಮತ್ತು (2)ನೇ ಉಪಪ್ರಕರಣದ (ಸಿ), (ಡಿ) ಮತ್ತು (ಇ) ಖಂಡಗಳಲ್ಲಿ ಉಲ್ಲೇಖಿಸಿದ ನಿರ್ದೇಶಕರನ್ನು ಅಧ್ಯಕ್ಷನೊಂದಿಗೆ ಸಮಾಲೋಚಿಸಿದ ತರುವಾಯ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡತಕ್ಕದ್ದು:

ಪರಂತು, (2)ನೇ ಉಪಪ್ರಕರಣದ (ಇ) ಖಂಡದಲ್ಲಿ ಉಲ್ಲೇಖಿಸಿದ ಅಧ್ಯಕ್ಷ ಮತ್ತು ನಿರ್ದೇಶಕನು ಒಂದು ಅಥವಾ ಹೆಚ್ಚಿನ ವಿಶಿಷ್ಟ ವಿಷಯಗಳಲ್ಲಿ, ಎಂದರೆ ಕ್ಷೀರೋದ್ಯಮ, ಪಶುಸಂಗೋಪನೆ, ಗ್ರಾಮೀಣ ಅರ್ಥಶಾಸ್ತ್ರ, ಗ್ರಾಮೀಣಾಭಿವೃದ್ಧಿ, ವ್ಯವಹಾರ ಆಡಳಿತ ಅಥವಾ ಬ್ಯಾಂಕಿಂಗ್ ಇವುಗಳಲ್ಲಿ ವೃತ್ತೀಯ ಅರ್ಹತೆ ಪಡೆದ ವ್ಯಕ್ತಿಗಳಾಗಿರತಕ್ಕದ್ದು.

(4) ಮಂಡಲಿಯು, ಈ ಅಧಿನಿಯಮದ ಯಾವುದೇ ಉಪಬಂಧವನ್ನು ಪಾಲಿಸುವಲ್ಲಿ, ಅದು ಯಾರ ಸಹಾಯವನ್ನು ಅಥವಾ ಸಲಹೆಯನ್ನು ಇಚ್ಛಿಸಬಹುದೋ ಆ ಯಾರೇ ವ್ಯಕ್ತಿಯನ್ನು ಅದು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ, ಅಂಥ ನಿಬಂಧನೆಗಳ ಮೇಲೆ ಮತ್ತು ಅಂಥ ಉದ್ದೇಶಗಳಿಗಾಗಿ ಅದರ ಜೊತೆಗೆ ಸೇರಿಸಿಕೊಳ್ಳಬಹುದು ಮತ್ತು ಹಾಗೆ ಸೇರಿಸಿಕೊಂಡ ವ್ಯಕ್ತಿಯು, ಅವನನ್ನು ಸೇರಿಸಿಕೊಂಡಿರುವಂಥ ಉದ್ದೇಶಗಳಿಗೆ ಸಂಬಂಧಪಟ್ಟ ಮಂಡಲಿಯ ಚರ್ಚೆಗಳಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರತಕ್ಕದ್ದು. ಆದರೆ ಅವನು ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

**9. ಅಧ್ಯಕ್ಷ ಮತ್ತು ನಿರ್ದೇಶಕರ ಪದಾವಧಿಗಳು ಮತ್ತು ಸೇವಾ ಷರತ್ತುಗಳು ಮುಂತಾದವು.**- (1) ಅಧ್ಯಕ್ಷನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಮುಖ್ಯ ಕಾರ್ಯನಿರ್ವಾಹಕನಾಗಿರತಕ್ಕದ್ದು ಮತ್ತು ಅವನು ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಹಾಗೆ ನಾಮನಿರ್ದೇಶನಗೊಂಡ ಯಾರೇ ವ್ಯಕ್ತಿಯು ಮರು ನಾಮನಿರ್ದೇಶನಕ್ಕಾಗಿ ಅರ್ಹನಾಗಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕೇಂದ್ರ ಸರ್ಕಾರವು, ಅಧ್ಯಕ್ಷನಿಗೆ ಮೂರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ಲಿಖಿತ ನೋಟೀಸನ್ನು ಅಥವಾ ಅದಕ್ಕೆ ಬದಲಾಗಿ ಮೂರು ತಿಂಗಳುಗಳ ಸಂಬಳವನ್ನು ಮತ್ತು ಭತ್ಯೆಗಳನ್ನು ಅವನಿಗೆ ಕೊಡುವ ಮೂಲಕ ಆ ಉಪಪ್ರಕರಣದ ಮೇರೆಗೆ ನಿರ್ಧರಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಅವನ ಸೇವೆಯನ್ನು ಕೊನೆಗೊಳಿಸುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ಅಧ್ಯಕ್ಷನು ಕೂಡ, ಕೇಂದ್ರ ಸರ್ಕಾರಕ್ಕೆ ಮೂರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ಲಿಖಿತ ನೋಟೀಸನ್ನು ಕೊಡುವ ಮೂಲಕ, ಆ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ತನ್ನ ಪದವನ್ನು ತ್ಯಜಿಸುವ ಹಕ್ಕುಳ್ಳವನಾಗಿರತಕ್ಕದ್ದು.

(3) ಅಧ್ಯಕ್ಷನು ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ವೇತನ ಮತ್ತು ಭತ್ಯಗಳನ್ನು ಪಡೆಯತಕ್ಕದ್ದು.

(4) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಕಾರ್ಯನಿರ್ವಾಹಕನನ್ನು 8ನೇ ಪ್ರಕರಣದ ಮೇರೆಗೆ ಅದರ ಪೂರ್ಣಕಾಲಿಕ ನಿರ್ದೇಶಕನನ್ನಾಗಿ ನಾಮನಿರ್ದೇಶನ ಮಾಡಲಾಗಿರುವಲ್ಲಿ, ಅಂಥ

ನಾಮನಿರ್ದೇಶನವು ಅವನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಕಾರ್ಯನಿರ್ವಾಹಕನಾಗಿ ಮುಂದುವರಿಯುವುದಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ ಮತ್ತು ಅವನು ನಿರ್ದೇಶಕನಾಗಿರುವುದು ನಿಂತು ಹೋದ ಮೇಲೆ ಅವನು ಅಂಥ ಕಾರ್ಯನಿರ್ವಾಹಕನಾಗಿ ಮುಂದುವರಿಯಬಹುದು.

(5) (8)ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ನಾಮನಿರ್ದೇಶಿತರಾದ ನಿರ್ದೇಶಕರು, ಕೇಂದ್ರ ಸರ್ಕಾರವು, ನಿರ್ಧರಿಸಬಹುದಾದಂತೆ, ಒಂದು ಬಾರಿಗೆ ಒಂದು ವರ್ಷವನ್ನು ಮೀರದಂಥ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು (8)ನೇ ಪ್ರಕರಣದ (2)ನೇ ಉಪಪ್ರಕರಣದ (ಡಿ) ಮತ್ತು (ಇ) ಖಂಡಗಳ ಮೇರೆಗೆ ನಾಮನಿರ್ದೇಶಿತರಾದ ನಿರ್ದೇಶಕರು, ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(6) ಅಧ್ಯಕ್ಷನನ್ನು ಹೊರತುಪಡಿಸಿ ಪ್ರತಿಯೊಬ್ಬ ನಿರ್ದೇಶಕನು, ಕೇಂದ್ರ ಸರ್ಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

(7) 8ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ), (ಸಿ) ಮತ್ತು (ಇ) ಖಂಡಗಳಲ್ಲಿ ಉಲ್ಲೇಖಿಸಿದ ನಿರ್ದೇಶಕರಿಗೆ, ಕೇಂದ್ರ ಸರ್ಕಾರವು, ನಿರ್ಧರಿಸಬಹುದಾದಂಥ ಭತ್ಯೆಗಳು ಸಂದಾಯವಾಗತಕ್ಕದ್ದು.

**10. ಮಂಡಲಿಯ ಸಭೆಗಳು.–** (1) ಮಂಡಲಿಯು, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಮುಖ್ಯ ಕಚೇರಿಯಲ್ಲಿ ಅಥವಾ ಅದರ ಯಾವುದೇ ಕಚೇರಿಯಲ್ಲಿ ಅಧ್ಯಕ್ಷನು ನಿರ್ದೇಶಿಸಬಹುದಾದಂಥ ಸಮಯಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ನಿಯಮಿಸಲಾದಂತೆ ಅದರ ಸಭೆಗಳಲ್ಲಿ ವ್ಯವಹಾರವನ್ನು ನಡೆಸುವುದರ ಬಗ್ಗೆ (ಸಭೆಯ ಕೋರಂ ಸೇರಿದಂತೆ) ಕಾರ್ಯವಿಧಾನದ ನಿಯಮಗಳನ್ನು ಪಾಲಿಸತಕ್ಕದ್ದು.

(2) ಅಧ್ಯಕ್ಷನು ಅಥವಾ ಮಂಡಲಿಯ ಸಭೆಗೆ ಹಾಜರಾಗಲು ಆತನು ಅಸಮರ್ಥನಾದರೆ, ಈ ಬಗ್ಗೆ ಅಧ್ಯಕ್ಷನು ನಾಮನಿರ್ದೇಶನ ಮಾಡಿದ ಯಾರೇ ಇತರ ನಿರ್ದೇಶಕನು ಮತ್ತು ಅಂಥ ನಾಮನಿರ್ದೇಶನವು ಇಲ್ಲದಿದ್ದರೆ ಅಥವಾ ಯಾರೇ ಅಧ್ಯಕ್ಷನು ಇಲ್ಲದಿರುವಲ್ಲಿ ಹಾಜರಿದ್ದ ನಿರ್ದೇಶಕರ ಪೈಕಿ ಅವರು ಆಯ್ಕೆ ಮಾಡಿದ ಯಾರೇ ನಿರ್ದೇಶಕನು ಆ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಮಂಡಲಿಯ ಯಾವುದೇ ಸಭೆಯ ಮುಂದೆ ಬರುವಂಥ ಎಲ್ಲಾ ಪ್ರಶ್ನೆಗಳನ್ನು, ಹಾಜರಿದ್ದು ಮತ ಚಲಾಯಿಸುವ ನಿರ್ದೇಶಕರ ಬಹುಮತದಿಂದ ತೀರ್ಮಾನಿಸತಕ್ಕದ್ದು ಮತ್ತು ಸಮಾನ ಮತಗಳ ಸಂದರ್ಭಗಳಲ್ಲಿ, ಅಧ್ಯಕ್ಷ ಅಥವಾ ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದು.

(4) (3)ನೇ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಮಂಡಲಿಯ ಪ್ರತಿಯೊಬ್ಬ ನಿರ್ದೇಶಕನು ಒಂದು ಮತವನ್ನು ಹೊಂದಿರತಕ್ಕದ್ದು.

**11. ಮಂಡಲಿಯ ವ್ಯವಹಾರವನ್ನು ನಡೆಸುವ ರೀತಿ.–** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಮಂಡಲಿಯು, ಅದರ ಪ್ರಕಾರ್ಯಗಳ ನಿರ್ವಹಣೆಯಲ್ಲಿ, ಸಾರ್ವಜನಿಕ ಹಿತಾಸಕ್ತಿಯನ್ನು ಸೂಕ್ತವಾಗಿ ಗಮನಿಸಿ, ಒಳ್ಳೆಯ ವ್ಯವಹಾರ ತತ್ವಗಳನ್ನನುಸರಿಸಿ ಕೆಲಸ ಮಾಡತಕ್ಕದ್ದು.

(2) ಅನ್ಯಥಾ ನಿಯಮಿಸಿರುವುದನ್ನು ಉಳಿದು, ಅಧ್ಯಕ್ಷನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಕಾರ್ಯಕಲಾಪಗಳು ಮತ್ತು ವ್ಯವಹಾರದ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ, ನಿಯಂತ್ರಣ ಮತ್ತು ವ್ಯವಸ್ಥಾಪನೆಯ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅವನು ಮಂಡಲಿಯು ಚಲಾಯಿಸಬಹುದಾದ ಅಥವಾ ಮಾಡಬಹುದಾದಂಥ ಎಲ್ಲಾ ಇತರ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಬಹುದು.

(3) ಅಧ್ಯಕ್ಷನು, ತಾನು ಇಲ್ಲದೆ ಇರುವ ಅಥವಾ ಅನ್ಯಥಾ ಕಾರಣದಿಂದಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾದಾಗ, ತಾತ್ಕಾಲಿಕ ಅವಧಿಗಾಗಿ ತನ್ನ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಯಾವನೇ ಪೂರ್ಣಕಾಲಿಕ ನಿರ್ದೇಶಕನನ್ನು ಅಧಿಕೃತಗೊಳಿಸಬಹುದು.

(4) ಯಾವುದೇ ಕಾರಣಕ್ಕಾಗಿ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವಂತೆ ಅಧ್ಯಕ್ಷನ ಮತ್ತು ಅಧಿಕೃತಗೊಳಿಸಿದ ಪೂರ್ಣಕಾಲಿಕ ನಿರ್ದೇಶಕನ ಗೈರುಹಾಜರಿಯಲ್ಲಿ, (8) ನೇ ಪ್ರಕರಣದ (2)ನೇ ಉಪಪ್ರಕರಣದ (ಡಿ) ಖಂಡದಲ್ಲಿ ಉಲ್ಲೇಖಿಸಿದ ಪೂರ್ಣಕಾಲಿಕ ನಿರ್ದೇಶಕರ ಪೈಕಿ ಅತ್ಯಂತ ಜ್ಯೇಷ್ಠನಾದವನು ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸಬಹುದು.

**12. ವ್ಯವಸ್ಥಾಪನಾ ಸಮಿತಿಗಳು.**- (1) ಮಂಡಲಿಯು ಕಾಲಕಾಲಕ್ಕೆ ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಯಲ್ಲಿ ಮಂಡಲಿಗೆ ನೆರವಾಗುವ ಉದ್ದೇಶಕ್ಕಾಗಿ ಅದು ಸೂಕ್ತವೆಂದು ಭಾವಿಸಬಹುದಾದಂಥ ಸಂಖ್ಯೆಯ ವ್ಯವಸ್ಥಾಪನಾ ಸಮಿತಿಗಳನ್ನು ರಚಿಸಬಹುದು.

(2) ಅಂಥ ಪ್ರತಿಯೊಂದು ಸಮಿತಿಯಲ್ಲಿ, ಅಧ್ಯಕ್ಷನಾಗಲಿ ಅಥವಾ ಒಬ್ಬ ಪೂರ್ಣಕಾಲಿಕ ನಿರ್ದೇಶಕನಾಗಲಿ ಅದರ ಸದಸ್ಯನಾಗಿರತಕ್ಕದ್ದು ಎಂಬ ಷರತ್ತಿಗೆ ಒಳಪಟ್ಟು, ಮಂಡಲಿಯು ನಿರ್ಧರಿಸಬಹುದಾದಷ್ಟು ಸಂಖ್ಯೆಯ (ನಿರ್ದೇಶಕರಾಗಲಿ ಅಥವಾ ಅನ್ಯಥಾ ಇತರೆ) ವ್ಯಕ್ತಿಗಳನ್ನು ವ್ಯವಸ್ಥಾಪನಾ ಸಮಿತಿಯು ಸದಸ್ಯರನ್ನಾಗಿ ಒಳಗೊಂಡಿರತಕ್ಕದ್ದು.

(3) ಪ್ರತಿಯೊಂದು ವ್ಯವಸ್ಥಾಪನಾ ಸಮಿತಿಯು, ಮಂಡಲಿಯ ಸಾಮಾನ್ಯ ನಿಯಂತ್ರಣ, ನಿರ್ದೇಶನ ಮತ್ತು ಅಧೀಕ್ಷಣೆಯಲ್ಲಿ ಮತ್ತು ಮಂಡಲಿಯು ನಿರ್ದೇಶಿಸಬಹುದಾದಂಥ ಅವಧಿಗಾಗಿ ಮತ್ತು ಅಂಥ ರೀತಿಯಲ್ಲಿ ಕೆಲಸ ಮಾಡತಕ್ಕದ್ದು.

(4) ವ್ಯವಸ್ಥಾಪನಾ ಸಮಿತಿಗಳ ಪ್ರತಿಯೊಂದು ಸಭೆಯ ನಡವಳಿಕೆಗಳನ್ನು ಸಾಧ್ಯವಾದಷ್ಟು ಬೇಗನೇ ಮಂಡಲಿಯ ಮುಂದೆ ಇಡತಕ್ಕದ್ದು.

**13. ವ್ಯವಸ್ಥಾಪನಾ ಸಮಿತಿಯ ಸದಸ್ಯರ ಭತ್ಯೆಗಳು, ಮುಂತಾದವು.**- (1) ಅಧ್ಯಕ್ಷ ಮತ್ತು ಪೂರ್ಣಕಾಲಿಕ ನಿರ್ದೇಶಕರನ್ನು ಹೊರತುಪಡಿಸಿ, ಯಾವುದೇ ವ್ಯವಸ್ಥಾಪನಾ ಸಮಿತಿಯ ಸದಸ್ಯರಿಗೆ, ವ್ಯವಸ್ಥಾಪನಾ ಸಮಿತಿಯ ಸಭೆಗಳಿಗೆ ಹಾಜರಾಗುವುದಕ್ಕಾಗಿ ಅಥವಾ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಇತರ ಯಾವುದೇ ಕೆಲಸಕ್ಕೆ ಹಾಜರಾಗುವುದಕ್ಕಾಗಿ ನಿಯಮಿಸಬಹುದಾದಂಥ ಭತ್ಯೆಗಳೇನಾದರೂ ಇದ್ದಲ್ಲಿ, ಅವುಗಳನ್ನು ಸಂದಾಯ ಮಾಡಬಹುದು.

(2) ವ್ಯವಸ್ಥಾಪನಾ ಸಮಿತಿಗಳ ವ್ಯವಹರಣೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟ ಇತರ ಎಲ್ಲಾ ವಿಷಯಗಳು, ನಿಯಮಿಸಬಹುದಾದಂತೆ ಇರತಕ್ಕದ್ದು.

**14. ವ್ಯವಸ್ಥಾಪನಾ ಸಮಿತಿ ಇತ್ಯಾದಿಗಳಿಗೆ ಅಧಿಕಾರಗಳ ಪ್ರತ್ಯಾಯೋಜನೆ.**- (1) ಮಂಡಲಿಯು, ಯಾವುದೇ ವ್ಯವಸ್ಥಾಪನಾ ಸಮಿತಿಗೆ ಅಥವಾ ಅದರ ಯಾರೇ ಸದಸ್ಯನಿಗೆ ಅಥವಾ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಯಾವನೇ ಅಧಿಕಾರಿಗೆ, ಮಂಡಲಿಯು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳೇನಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ, ಅದು ಅವಶ್ಯವೆಂದು ಭಾವಿಸಬಹುದಾದಂಥ ಈ ಅಧಿನಿಯಮದ ಮೇರೆಗಿನ ಅದರ ಅಂಥ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಹುದು.

(2) ಮಂಡಲಿಯು, ತಾನು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿ ಗಳೇನಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ತನ್ನ ಯಾವುದೇ ಅಧಿಕಾರ ಅಥವಾ ಪ್ರಕಾರ್ಯವನ್ನು ರಾಷ್ಟ್ರೀಯ ಅಥವಾ ರಾಜ್ಯಮಟ್ಟದ ಸಹಕಾರಿ ಸಂಯುಕ್ತ ಸಂಘಕ್ಕೆ ಅಥವಾ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಒಡೆತನ, ವ್ಯವಸ್ಥಾಪನೆ, ನಿಯಂತ್ರಣದಲ್ಲಿರುವ ಅಥವಾ ಅದರಿಂದ ಸಹಾಯಪಡೆದ ಯಾವುದೇ ಸಂಘಟನೆಗೆ ಪ್ರತ್ಯಾಯೋಜಿಸುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಅವಶ್ಯವೆಂದು ಪರಿಗಣಿಸಿದರೆ ಹಾಗೆ ಮಾಡಬಹುದು.

**15. ಪೂರ್ಣಕಾಲಿಕ ನಿರ್ದೇಶಕರು ಮೊದಲಾದವರಿಗೆ ಅಧಿಕಾರಗಳ ಪ್ರತ್ಯಾಯೋಜನೆ.**- ಮಂಡಲಿಯು, ಕಾಲಕಾಲಕ್ಕೆ ಆದೇಶದ ಮೂಲಕ ತಾನು ವಿಧಿಸಲು ಸೂಕ್ತವೆಂದು ಭಾವಿಸಬಹುದಾದಂಥ ಸಾಮಾನ್ಯ ಮತ್ತು ವಿಶೇಷ ಷರತ್ತುಗಳಿಗೆ ಒಳಪಟ್ಟು,-

(ಎ) ಪೂರ್ಣಕಾಲಿಕ ನಿರ್ದೇಶಕನಿಗೆ ನಿಯಮಿಸಬಹುದಾದಂಥ ಇನ್ನೂ ಹೆಚ್ಚಿನ ಶ್ರೇಣಿಯಲ್ಲಿನ ಸಂಬಳವನ್ನು ಪಡೆಯುತ್ತಿರುವ; ಮತ್ತು

(ಬಿ) (ಎ) ಖಂಡದ ಮೇರೆಗೆ ನಿಯಮಿಸಿದ ಇನ್ನೂ ಹೆಚ್ಚಿನ ಶ್ರೇಣಿಯನ್ನು ಹೊರತುಪಡಿಸಿ ಯಾವುದೇ ಶ್ರೇಣಿಯಲ್ಲಿ ಸಂಬಳವನ್ನು ಪಡೆಯುತ್ತಿರುವ;

- ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಯಾರೇ ನೌಕರನ ನೇಮಕಾತಿ, ಅದನ್ನು ಕೊನೆಗೊಳಿಸುವಿಕೆ, ಅಮಾನತು ಮತ್ತು ಅದರಿಂದ ವಜಾ ಮಾಡುವ ಅಧಿಕಾರಗಳನ್ನು, ಅದು ಸೂಕ್ತವೆಂದು ಭಾವಿಸಬಹುದಾದಂಥ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು:

ಪರಂತು, (ಬಿ) ಖಂಡದ ಅಡಿಯಲ್ಲಿ ಬರುವ ನಿಯೋಜಿತರಿಗೆ ಸಂಬಂಧಪಟ್ಟಂತೆ, ಅಧ್ಯಕ್ಷನು, ಈ ಪ್ರಕರಣದ ಮೇರೆಗಿನ ಮಂಡಲಿಯ ಪ್ರಕಾರ್ಯಗಳನ್ನು ನೆರವೇರಿಸುವುದು ಅವಶ್ಯ ಅಥವಾ ವಿಹಿತವೆಂದು ಅವನು ಪರ್ಯಾಲೋಚಿಸಿದರೆ ಹಾಗೆ ಮಾಡುವುದು.

## ಅಧ್ಯಾಯ– IV

### ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು

**16. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.**- (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಈ ಕೆಳಕಂಡವುಗಳ ಬಗ್ಗೆ ಉಪಬಂಧಿಸಬಹುದು,–

(ಎ) ಹೈನುಗಾರಿಕೆ ಅಭಿವೃದ್ಧಿ ಮತ್ತು ಇತರ ಕೃಷಿ ಆಧಾರಿತ ಮತ್ತು ಸಂಬಂಧಿತ ಉದ್ಯಮಗಳು ಮತ್ತು ಜೀವ ಶಾಸ್ತ್ರೀಯ ಉತ್ಪನ್ನಗಳ ಅಭಿವೃದ್ಧಿಯ ಉದ್ದೇಶಗಳಿಗಾಗಿ ಸಾಂದ್ರ ಮತ್ತು ರಾಷ್ಟ್ರವ್ಯಾಪೀ ಆಧಾರದ ಮೇಲೆ, ಕಾರ್ಯಕ್ರಮಗಳನ್ನು ಪ್ರವರ್ತಿಸುವುದು, ಯೋಜಿಸುವುದು ಮತ್ತು ಸಂಘಟಿಸುವುದು ಮತ್ತು ಅಂಥ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ ಸಹಾಯ ಮಾಡುವುದು - ಇವು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಕರ್ತವ್ಯ ಮತ್ತು ಪ್ರಕಾರ್ಯವಾಗಿರತಕ್ಕದ್ದು;

(ಬಿ) ಸಾಂದ್ರ ಮತ್ತು ರಾಷ್ಟ್ರವ್ಯಾಪೀ ಆಧಾರದ ಮೇಲೆ ಇನ್ನೂ ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಸಹಕಾರಿ ತಂತ್ರವನ್ನು ಅಂಗೀಕರಿಸುವುದು ಮತ್ತು ಹಿಂದೆ ಹೇಳಿದ ಉದ್ದೇಶಗಳಿಗಾಗಿ ಅವಶ್ಯವಾಗಬಹುದಾದಂಥ ಕ್ರಮಗಳನ್ನು ಕೈಗೊಳ್ಳುವುದು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಹೊಣೆಗಾರಿಕೆಯಾಗತಕ್ಕದ್ದು; ಮತ್ತು

(ಸಿ) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು, ತಾನು ಸದರಿ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ, ಮತ್ತು ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳ ಚಲಾವಣೆ ಮತ್ತು ತನ್ನ ಪ್ರಕಾರ್ಯಗಳು ಮತ್ತು ಹೊಣೆಗಾರಿಕೆಗಳ ನೆರವೇರಿಕೆಗಾಗಿ ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು.

(2) ವಿಶೇಷವಾಗಿ ಮತ್ತು ಹಿಂದೆಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅದರಲ್ಲಿ ಉಲ್ಲೇಖಿಸಲಾದ ಕ್ರಮಗಳು,–

(ಎ) ಹೈನುಗಾರಿಕೆ, ಸೋಂಕು ರಕ್ಷಾ ಶಾಸ್ತ್ರ, ಪಶುಸಂಗೋಪನೆ, ಕೃಷಿ ಮತ್ತು ತೋಟಗಾರಿಕೆಯ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಸಂವರ್ಧನಾ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಡುವುದು;

(ಬಿ) ಹಾಲು ಮತ್ತು ಹಾಲಿನ ಉತ್ಪನ್ನಗಳ ತಯಾರಿಕೆ, ಸಂಗ್ರಹಣೆ, ಪರಿರಕ್ಷಣೆ ಅಥವಾ ಕ್ರಯವಿಕ್ರಯದಲ್ಲಿ ತೊಡಗಿರುವಂಥ ಸಹಕಾರಿ ಅಥವಾ ಸರ್ಕಾರೀ ವಲಯದಲ್ಲಿನ ಅಂಥ ಸಂಘಟನೆಗಳಿಗೆ ತಾಂತ್ರಿಕ ತಿಳಿವಳಿಕೆಯನ್ನು ಕೊಡುವುದು;

(ಸಿ) ಕೊಡಬಹುದಾದ ತಾಂತ್ರಿಕ ತಿಳಿವಳಿಕೆಯನ್ನು ಅಳವಡಿಸಿಕೊಳ್ಳುವುದಕ್ಕಾಗಿ ಮತ್ತು ಉಪಯೋಗಿಸುವುದಕ್ಕಾಗಿ ಸಿಬ್ಬಂದಿಯ ತರಬೇತಿಗೆ ಅನುಕೂಲ ಮಾಡಿಕೊಡುವುದು;

(ಡಿ) ಹೈನೋದ್ಯಮಗಳನ್ನು ವಿನ್ಯಾಸಗೊಳಿಸುವುದು, ಯೋಜಿಸುವುದು, ಸಂವರ್ಧಿಸುವುದು, ಅಭಿವೃದ್ಧಿಗೊಳಿಸುವುದು, ನಿರ್ಮಿಸುವುದು, ಪ್ರಾಯೋಜಿಸುವುದು ಮತ್ತು ಸ್ಥಾಪಿಸುವುದು ಹಾಗೂ

ಅವುಗಳಿಗೆ ಹಣ ಒದಗಿಸುವುದನ್ನೊಳಗೊಂಡು ಯಾವುದೇ ಇತರ ಸಂಬಂಧಪಟ್ಟ ಸಂವರ್ಧಕ ಚಟುವಟಿಕೆಯನ್ನು ಕೈಗೊಳ್ಳುವುದು;

(ಇ) ಸಮಾಲೋಚನೆ ಮತ್ತು ವ್ಯವಸ್ಥಾಪನಾ ಸೇವೆಗಳನ್ನು ಒದಗಿಸುವುದು ಮತ್ತು ಹಾಲು ಹಾಗೂ ಹಾಲಿನ ಉತ್ಪನ್ನಗಳ ದಾಸ್ತಾನು, ಸಾಗಣೆ, ಸಂಸ್ಕರಣ, ವಿತರಣೆ ಮುಂತಾದ ಸಮಗ್ರ ಸೇವೆಗಳನ್ನು ಒದಗಿಸುವುದು ಮತ್ತು ಹಾಲು ಹಾಗೂ ಹಾಲಿನ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಅಗ್ರ ಸಂಸ್ಥೆಯಾಗಿ ಕೆಲಸಮಾಡಲು, ಟರ್ನ್‌ಕೀ ಆಧಾರದ ಮೇಲೆ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸುವುದು;

(ಎಫ್) (i) ಎಲ್ಲಾ ಹಂತಗಳಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳು ಹಾಳಾಗುವುದನ್ನು ತಪ್ಪಿಸುವ ಮೂಲಕ ಅಥವಾ ಅನ್ಯಥಾ ಅವುಗಳ ಸಂರಕ್ಷಣೆಗಾಗಿ;

(ii) ಪ್ರೋತ್ಸಾಹಕ ಬೆಲೆಗಳನ್ನು ಪಡೆಯಲು ಸಹಕಾರೀ ಮತ್ತು ಸರ್ಕಾರಿ ವಲಯದಲ್ಲಿನ ಹಾಲು ಮತ್ತು ಹಾಲಿನ ಉತ್ಪನ್ನಗಳ ಪ್ರಾಥಮಿಕ ಉತ್ಪಾದಕರು ಮತ್ತು ವ್ಯಕ್ತಿಗಳಿಗೆ ಸಹಾಯ ಮಾಡುವುದಕ್ಕಾಗಿ; ಮತ್ತು

(iii) ರಾಷ್ಟ್ರೀಯ ಹಾಲಿನ ಜಾಲವನ್ನು ನಿರ್ಮಿಸುವುದಕ್ಕಾಗಿ

– ಕಾರ್ಯಸಾಧ್ಯವಾಗಬಹುದಾದಂಥ ಕ್ರಮಗಳನ್ನು ಅಳವಡಿಸುವುದು.

(ಜಿ) ಅವಶ್ಯವಿದ್ದಂತೆ ಮತ್ತು ಅವಶ್ಯವಿದ್ದಾಗಲೆಲ್ಲಾ ಹಾಲಿನ ಖರೀದಿ ಅಥವಾ ಮಾರಾಟಕ್ಕಾಗಿ ನಿಗದಿಪಡಿಸಬೇಕಾದ ಗರಿಷ್ಠ ಮತ್ತು ಕನಿಷ್ಠ ಬೆಲೆಗಳನ್ನು ಸರ್ಕಾರಕ್ಕೆ ಶಿಫಾರಸು ಮಾಡುವುದು ಮತ್ತು ಹಾಗೆ ಅಗತ್ಯವಾದಾಗ ಅದನ್ನು ಜಾರಿಗೊಳಿಸುವಲ್ಲಿ ಸಹಾಯ ಮಾಡುವುದು;

(ಹೆಚ್) ಹಾಲು ಅಥವಾ ಹಾಲಿನ ಉತ್ಪನ್ನಗಳು ಮತ್ತು ಹಾಲು ಕೊಡುವ ಜಾನುವಾರುಗಳು, ಅಥವಾ ಹೋರಿಗಳ ಆಮದು ಮತ್ತು ರಫ್ತಿಗೆ ಸಂಬಂಧಿಸಿದಂತೆ ವಿತರಣಾ ಏಜೆನ್ಸಿಯಾಗಿ ಕಾರ್ಯಮಾಡುವುದು;

(ಐ) (ಎ) ಹೆಚ್ಚು ಹಾಲುಕೊಡುವ ಪಶುಗಳ (ಅಗತ್ಯವಾದರೆ ಗುಣಮಟ್ಟದ ವೀರ್ಯವನ್ನು ಆಮದು ಮಾಡಿಕೊಳ್ಳುವ ಮೂಲಕ) ಅಭಿವೃದ್ಧಿ ಮತ್ತು ಪರಿರಕ್ಷಣೆಗಾಗಿ;

(ಬಿ) ಪಶುಸಂವರ್ಧನೆಯ ಸುಧಾರಿತ ಪದ್ಧತಿಗಳನ್ನು ಅಂಗೀಕರಿಸುವುದಕ್ಕಾಗಿ;

(ಸಿ) ಮೇವನ್ನು ಒಳಗೊಂಡು ಉತ್ತಮ ಮತ್ತು ಸುಧಾರಿತ ಜಾನುವಾರು ಆಹಾರದ ಉತ್ಪಾದನೆ ಮತ್ತು ಸರಬರಾಜನ್ನು ಹೆಚ್ಚಿಸುವುದಕ್ಕಾಗಿ; ಮತ್ತು

(ಡಿ) ಸಾಮಾನ್ಯವಾಗಿ ದೇಶದ ಪಶು ಸಂಪತ್ತನ್ನು ವೃದ್ಧಿಗೊಳಿಸುವುದಕ್ಕಾಗಿ;

– ಅವಶ್ಯವಾಗಬಹುದಾದಂಥ ಆರ್ಥಿಕ, ತಾಂತ್ರಿಕ, ಆಡಳಿತಾತ್ಮಕ, ವ್ಯವಸ್ಥಾಪನಾ ಅಥವಾ ಇತರ ಸಹಾಯವನ್ನು ಒದಗಿಸುವುದು ಅಥವಾ ಅಂಥ ಕ್ರಮಗಳನ್ನು ಕೈಗೊಳ್ಳುವುದು;

(ಜೆ) ಲಭ್ಯವಿರುವ ಸಂಸ್ಥೆಗಳನ್ನು ಉಪಯೋಗಿಸಿಕೊಳ್ಳುವ ಮೂಲಕ ಅಥವಾ ಅನ್ಯಥಾ ಮಂಡಲಿಯು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ತಾಂತ್ರಿಕ, ಕೈಗಾರಿಕಾ ಅಥವಾ ಆರ್ಥಿಕ ಸಂಶೋಧನೆಯನ್ನು ಪ್ರಾರಂಭಿಸುವುದು, ಸಂವರ್ಧಿಸುವುದು ಅಥವಾ ಅದಕ್ಕೆ ಹಣಕಾಸು ಒದಗಿಸುವುದು;

(ಕೆ) ರಾಷ್ಟ್ರವ್ಯಾಪಿಯಾಗಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಉತ್ಪಾದನೆ, ಪರಿರಕ್ಷಣೆ, ವಿತರಣೆ ಮತ್ತು ಬಳಕೆಯನ್ನು ಪ್ರೋತ್ಸಾಹಿಸಲು ಉದ್ದೇಶಿಸಿರುವ ಸಹಕಾರಿ ಮಹಾ ಮಂಡಲಗಳು, ಸಹಕಾರಿ ಒಕ್ಕೂಟಗಳು ಅಥವಾ ಸಹಕಾರೀ ಉದ್ಯಮಗಳಿಗೆ ಅಥವಾ ಸಹಕಾರೀ ಅಥವಾ ಸರ್ಕಾರೀ ವಲಯದಲ್ಲಿನ ಯಾವುದೇ ಯೋಜನೆಗೆ ಮಂಡಲಿಯು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ (ಬಂಡವಾಳಕ್ಕೆ ಕೊಡುವ ವಂತಿಗೆಯನ್ನು ಒಳಗೊಂಡು) ಹಣಕಾಸು ಒದಗಿಸುವುದು;

(ಎಲ್) ಹೈನುಗಾರಿಕೆ ಮತ್ತು ಸಂಬಂಧಪಟ್ಟ ಕೈಗಾರಿಕೆಗಳನ್ನು ನಿಯಂತ್ರಿಸುವುದು ಮತ್ತು ಕೇಂದ್ರ ಸರ್ಕಾರವು ಅಗತ್ಯಪಡಿಸಬಹುದಾದಂತೆ, ಅದಕ್ಕಾಗಿ ನಿಯಂತ್ರಕ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುವುದು;

(ಎಂ) ಹೈನುಗಾರಿಕೆ ಮತ್ತು ಸಂಬಂಧಪಟ್ಟ ಕೈಗಾರಿಕೆಗಳಲ್ಲಿ ಅಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ಪಾಲುದಾರರು ಮತ್ತು ಅವುಗಳ ಫಲಾನುಭವಿಗಳಾಗುವಂತೆ ಅವುಗಳ ಪ್ರಾಥಮಿಕ ಉತ್ಪಾದಕರಿಗೆ ಅನುಕೂಲವಾಗುವುದಕ್ಕಾಗಿ ಹಾಲು ಮತ್ತು ಹಾಲಿನ ಉತ್ಪನ್ನಗಳ ತಯಾರಿಕೆಯಲ್ಲಿನ ಸಂಘಟನೆಗಳ ಅಭಿವೃದ್ಧಿ ಮತ್ತು ಸಮನ್ವಯಕ್ಕಾಗಿ ಕ್ರಮಗಳನ್ನು ಕೈಗೊಳ್ಳುವುದು;

(ಎನ್) ರಾಷ್ಟ್ರೀಯ ಹಾಲಿನ ಜಾಲದ ಮತ್ತು ರಾಷ್ಟ್ರೀಯ ಹಾಲುಕೊಡುವ ಜಾನುವಾರುಗಳ ಹಿಂಡಿನ ದಕ್ಷ ವ್ಯವಸ್ಥಾಪನೆಗಾಗಿ ಅವಶ್ಯವಾದ ಮತ್ತು ಹೈನುಗಾರಿಕೆಗೆ ಮತ್ತು ಸಂಬಂಧಪಟ್ಟ ಕೈಗಾರಿಕೆಗಳಿಗೆ ಸಂಬಂಧಿಸಿದ ಯಾವುದೇ ಇತರ ವಿಷಯದ ಬಗ್ಗೆ ಸಂಬಂಧಪಟ್ಟ ಅಂಕಿ ಅಂಶಗಳು ಮತ್ತು ಅಂಕಿ ಸಂಖ್ಯೆಗಳನ್ನು ಸಂಗ್ರಹಿಸುವುದು ಮತ್ತು ಸಂಕಲಿಸುವುದು;

(ಒ) ಹೈನುಗಾರಿಕೆ ಮತ್ತು ಸಂಬಂಧಪಟ್ಟ ಕೈಗಾರಿಕೆಗಳ ಸಂಶೋಧನೆ ಮತ್ತು ಅಭಿವೃದ್ಧಿಯ ಬಗ್ಗೆ ಪ್ರಚಾರವನ್ನು ಸಂವರ್ಧಿಸುವುದು;

(ಪಿ) ದೇಶದ ವಿವಿಧ ಭಾಗಗಳಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ತಯಾರಿಕೆ, ಶ್ರೇಣೀಕರಣ ಮತ್ತು ಕ್ರಯ- ವಿಕ್ರಯವನ್ನು ಸಂವರ್ಧಿಸುವುದು ಮತ್ತು ಆಭಿವೃದ್ಧಿಪಡಿಸುವುದು;

(ಕ್ಯೂ) ಅಂತರರಾಷ್ಟ್ರೀಯ ಸಂಘಟನೆ ಮತ್ತು ವಿದೇಶೀ ತಜ್ಞರೊಂದಿಗೆ ಸಹಕರಿಸುವುದು ಮತ್ತು ಹಾಲು ಮತ್ತು ಹಾಲಿನ ಉತ್ಪನ್ನಗಳು ಮತ್ತು ಯಾವುವೇ ಇತರ ಆಹಾರ ಪದಾರ್ಥಗಳ ಯಾವುದೇ ಕೊಡುಗೆಯ ಸ್ವೀಕಾರ, ಉಪಯೋಗ ಮತ್ತು ಬಟವಾಡೆಗಾಗಿ ಕೇಂದ್ರ ಸರ್ಕಾರದ ಏಜೆಂಟ್ ಆಗಿ ಕೆಲಸ ಮಾಡುವುದಕ್ಕಾಗಿ ಸಹಕರಿಸುವುದು;

(ಆರ್) ಮೂಲ ವ್ಯಾಪಾರ ಸರಕುಗಳ ಕಾಪು ದಾಸ್ತಾನಿನ ವ್ಯವಸ್ಥೆ ಮಾಡುವುದು;

(ಎಸ್) ಮಂಡಲಿಯ ಅಭಿಪ್ರಾಯದಲ್ಲಿ, ಹಾಳಾಗುವುದನ್ನು ತಪ್ಪಿಸುವುದು ಅಥವಾ ಅನ್ಯಥಾ ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುವುದು ಮತ್ತು ಸಾಮಾನ್ಯವಾಗಿ ಅದು ಉತ್ಪಾದಿಸಿದ, ಸಂಸ್ಕರಿಸಿದ ಅಥವಾ ಸಂವರ್ಧಿಸಿದ ಯಾವುದೇ ಪದಾರ್ಥವನ್ನು ರಫ್ತು ಮಾಡುವುದಕ್ಕಾಗಿ ಹಾಗು ಅಗತ್ಯವಾಗಿರುವಲ್ಲಿ, ಹಾಲು ಮತ್ತು ಹಾಲಿನ ಉತ್ಪನ್ನಗಳ ರಫ್ತನ್ನು ಸಂವರ್ಧಿಸುವುದು;

(ಟಿ) ಅದರ ವ್ಯವಹಾರದ ಉದ್ದೇಶಗಳಿಗಾಗಿ ಯಾವುದೇ ಸ್ವತ್ತನ್ನು ಆರ್ಜಿಸುವುದು, ಧಾರಣ ಮಾಡುವುದು ಮತ್ತು ವಿಲೆ ಮಾಡುವುದು;

(ಯು) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಿಂದ ಸಹಾಯವನ್ನು ಸ್ವೀಕರಿಸುತ್ತಿರುವ ಯಾವುವೇ ಸಂಘಟನೆಗಳಿಗೆ ಸಂಬಂಧಿಸಿದಂತೆ ಅದರ ವ್ಯವಸ್ಥಾಪನಾ, ತಾಂತ್ರಿಕ ಅಥವಾ ಇತರ ಪ್ರಕಾರ್ಯಗಳನ್ನು ಪೂರ್ಣವಾಗಿ ಅಥವಾ ಭಾಗಶಃ ಸ್ವೀಕರ್ತ ಸಂಘಟನೆಗೆ ವರ್ಗಾಯಿಸುವುದು;

(ವಿ) ಚರ ಅಥವಾ ಸ್ಥಿರ ಸ್ವತ್ತಿನ ಭದ್ರತೆಯ ಮೇಲೆ ಅಥವಾ ಅನ್ಯಥಾ ಹಣವನ್ನು ಮುಂಗಡವಾಗಿ ಕೊಡುವುದು ಅಥವಾ ಸಾಲ ಕೊಡುವುದು;

(ಡಬ್ಲ್ಯೂ) ಮಂಡಲಿಯು, ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಭದ್ರತೆಯ ಮೇಲೆ ಹಣವನ್ನು ಸಾಲವಾಗಿ ಪಡೆಯುವುದು;

(ಎಕ್ಸ್) ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ ಸಂಘ ಅಥವಾ ವಿಘಟಿತ ಕಂಪನಿಯು ಅಂಥ ವ್ಯವಹಾರ ಅಥವಾ ವ್ಯವಹಾರಗಳ ವರ್ಗವನ್ನು ನಡೆಸಿಕೊಂಡು ಹೋಗುತ್ತಿದ್ದಂಥ ಸಂದರ್ಭದಲ್ಲಿ, ಯಾವುದೇ ಇತರ ವ್ಯವಹಾರ ಅಥವಾ ವ್ಯವಹಾರದ ವರ್ಗವನ್ನು ಸ್ವತಃ ಅಥವಾ ಯಾವುದೇ ಇತರ ಸಂಘಟನೆಗಳ ಮೂಲಕ ನಡೆಸಿಕೊಂಡು ಹೋಗುವುದು;

(ವೈ) ಹಾಲು ಮತ್ತು ಹಾಲಿನ ಉತ್ಪನ್ನಗಳ ಮತ್ತಿತರ ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ತೊಡಗಿರುವವರೊಳಗೆ ಸಹಕಾರೀಚಟುವಟಿಕೆಗಳನ್ನು ಸಂವರ್ಧಿಸುವುದು ಮತ್ತು ಪ್ರೋತ್ಸಾಹಿಸುವುದು;

(ಜೆಡ್) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಕೊಟ್ಟ ಯಾವುದೇ ಸಹಾಯ ಅಥವಾ ಸಲ್ಲಿಸಿದ ಸೇವೆಗಾಗಿ ಫೀಜುಗಳು ಅಥವಾ ಇತರೆ ಚಾರ್ಜುಗಳನ್ನು ವಿಧಿಸುವುದು;

(ಜೆಡ್ಎ) ಈ ಅಧಿನಿಯಮದ ಮೇರೆಗೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಉದ್ದೇಶಗಳನ್ನು ಮುಂದುವರಿಸಲು ಪ್ರಾಸಂಗಿಕವಾಗಿ ಅಥವಾ ಅನುಕೂಲಕರವಾಗಿ ಅವಶ್ಯ ವಾಗಬಹುದಾದಂಥ ಯಾವುದೇ ಇತರ ವ್ಯವಹಾರವನ್ನು ನಡೆಸಿಕೊಂಡು ಹೋಗುವುದು ಅಥವಾ ಯಾವುದೇ ಇತರ ಕೆಲಸ ಕಾರ್ಯವನ್ನು ಮಾಡುವುದು.

(3) ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ, ಆ ಸಂಘವಾಗಲಿ ಅಥವಾ ವಿಘಟಿತ ಕಂಪನಿಯಾಗಲಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಅಥವಾ ಹೈನುಗಾರಿಕೆಯನ್ನು ಹೊರತುಪಡಿಸಿ ಯಾವುದೇ ವಸ್ತು ಅಥವಾ ಉತ್ಪಾದಿತ ವಸ್ತುವಿಗೆ ಸಂಬಂಧಿಸಿದಂತೆ ಉತ್ಪಾದನೆ, ಸಂಶೋಧನೆ ಮತ್ತು ಅಭಿವೃದ್ಧಿ, ಸಂಸ್ಕರಣ, ಕ್ರಯ-ವಿಕ್ರಯ, ಆಮದು, ರಫ್ತು ಅಥವಾ ಇತರೆ ಚಟುವಟಿಕೆಗಳಲ್ಲಿ ತೊಡಗಿದ್ದರೆ, ಅಥವಾ ಯಾವುದೇ ಸೇವೆ ಅಥವಾ ಸಹಾಯವನ್ನು ಮಾಡುತ್ತಿದ್ದರೆ, ಆಗ, ಈ ಅಧಿನಿಯಮದಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು, ಸದರಿ ವಸ್ತು ಅಥವಾ ಉತ್ಪಾದಿತ ವಸ್ತುವಿಗೆ ಸಂಬಂಧಿಸಿದಂತೆ ಉತ್ಪಾದನೆ, ಸಂಶೋಧನೆ ಮತ್ತು ಅಭಿವೃದ್ಧಿ, ಸಂಸ್ಕರಣ, ಕ್ರಯ-ವಿಕ್ರಯ, ಆಮದು, ರಫ್ತು ಅಥವಾ ಇತರ ಚಟುವಟಿಕೆಗಳಲ್ಲಿ ತೊಡಗಬಹುದು, ಅಥವಾ ಅಗತ್ಯಪಡಿಸಬಹುದಾದಂತೆ ಅಂಥ ಇತರೆ ಸೇವೆಗಳು ಅಥವಾ ಸಹಾಯವನ್ನು ಮಾಡಬಹುದು, ಮತ್ತು (1) ಮತ್ತು (2)ನೇ ಉಪಪ್ರಕರಣಗಳ ಉಪಬಂಧಗಳು, ಸಾಧ್ಯವಾದಷ್ಟು ಮಟ್ಟಿಗೆ ಆ ವಸ್ತು ಅಥವಾ ಉತ್ಪಾದಿತ ವಸ್ತುವಿಗೆ ಸಂಬಂಧಿಸಿದಂತೆ, ಹಾಲು ಮತ್ತು ಹಾಲಿನ ಉತ್ಪನ್ನಗಳ ಬಗ್ಗೆ ಅಂಥ ಹೈನುಗಾರಿಕೆ ಮತ್ತು ಸಂಬಂಧಪಟ್ಟ ಕೈಗಾರಿಕೆಗಳ ಬಗ್ಗೆ ಅದರಲ್ಲಿ ಮಾಡಲಾಗಿರುವ ಯಾವುದೇ ಉಲ್ಲೇಖವು ಆ ವಸ್ತು ಅಥವಾ ಉತ್ಪನ್ನ ಅಥವಾ ಸೇವೆ ಅಥವಾ ಚಟುವಟಿಕೆಯ ಬಗ್ಗೆ ಮಾಡಿದ ಉಲ್ಲೇಖವಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(4) ಕೇಂದ್ರ ಸರ್ಕಾರವು ಅಥವಾ ಯಾವುದೇ ರಾಜ್ಯ ಸರ್ಕಾರವು, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ವಿಶೇಷ ತಜ್ಞತೆ ಮತ್ತು ಸಾರ್ವಜನಿಕ ಅವಶ್ಯಕತೆಗಳನ್ನು ಗಮನಿಸಿ, ಹಿಂದೆ ಹೇಳಿದ ಉಪಪ್ರಕರಣಗಳು ಅನ್ವಯವಾಗುವುದನ್ನು ಹೊರತುಪಡಿಸಿ, ಯಾವುದೇ ಚಟುವಟಿಕೆಯನ್ನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಗೆ ವಹಿಸುವುದು ಆವಶ್ಯಕ ಅಥವಾ ಸೂಕ್ತವೆಂದು ಪರ್ಯಾಲೋಚಿಸಿದರೆ, ಅದು ಅಂಥ ಚಟುವಟಿಕೆಯನ್ನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಗೆ ವಹಿಸಿಕೊಡಬಹುದು; ಆ ತರುವಾಯ, ಅಂಥ ಚಟುವಟಿಕೆಯನ್ನು ನಡೆಸಿಕೊಂಡು ಹೋಗಲು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಸಕ್ಷಮವಾಗಿರತಕ್ಕದ್ದು.

(5) ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಯಾವುದೇ ಇತರ ಸಂಘಟನೆಯಲ್ಲಿ, ಹಣಕಾಸಿನ ರೂಪದಲ್ಲಿ , ವ್ಯವಸ್ಥಾಪನಾ ರೂಪದಲ್ಲಿ ಅಥವಾ ಯಾವುದೇ ಇತರ ರೀತಿಯಲ್ಲಿ ಭಾಗವಹಿಸಲು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಸಕ್ಷಮವಾಗಿರತಕ್ಕದ್ದು.

## ಅಧ್ಯಾಯ – V

## ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ನಿರ್ದೇಶಕರು ಮತ್ತು ನೌಕರರಿಗೆ ಸಂಬಂಧಿಸಿದ ಉಪಬಂಧಗಳು

**17. ಸಂಘದ ಮಂಡಲಿಯ ಸದಸ್ಯರು ಮತ್ತು ವಿಘಟಿತ ಕಂಪನಿಯ ನಿರ್ದೇಶಕರಿಗೆ ಸಂಬಂಧಪಟ್ಟ ಉಪಬಂಧಗಳು.–** ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ ಆ ಸಂಘದ ಮಂಡಲಿಯ ಸದಸ್ಯನಾಗಿ ಅಥವಾ ಆ ವಿಘಟಿತ ಕಂಪನಿಯ ನಿರ್ದೇಶಕನಾಗಿ ಪದಧಾರಣ ಮಾಡಿರುವ ಪ್ರತಿಯೊಬ್ಬ ವ್ಯಕ್ತಿಯು, ಆ ದಿವಸದಂದು ಮತ್ತು ಅಂದಿನಿಂದ, ಅಂಥ ಸದಸ್ಯ ಅಥವಾ ನಿರ್ದೇಶಕನಾಗಿ ಪದಧಾರಣ ಮಾಡಿರುವುದು ನಿಂತುಹೋಗತಕ್ಕದ್ದು.

**18. ಸಂಘದ ಮತ್ತು ವಿಘಟಿತ ಕಂಪನಿಯ ಅಧಿಕಾರಿಗಳು ಮತ್ತು ಇತರ ನೌಕರರಿಗೆ ಸಂಬಂಧಪಟ್ಟ ಉಪಬಂಧಗಳು.–** 19ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ ಆ ಸಂಘ ಅಥವಾ ವಿಘಟಿತ ಕಂಪನಿಯಲ್ಲಿ ಪದಧಾರಣ ಮಾಡಿರುವ ಪ್ರತಿಯೊಬ್ಬ

ಪೂರ್ಣಕಾಲಿಕ ಅಧಿಕಾರಿ ಅಥವಾ ಇತರೆ ನಿಯೋಜಿತನು, ಗೊತ್ತುಪಡಿಸಿದ ದಿವಸದಂದು ಮತ್ತು ಅಂದಿನಿಂದ ಸಂದರ್ಭಾನುಸಾರ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಅಧಿಕಾರಿ ಅಥವಾ ಇತರ ನೌಕರನಾಗತಕ್ಕದ್ದು ಮತ್ತು ಸಂದರ್ಭಾನುಸಾರ ಅವನು ಸಂಘದ ಅಥವಾ ವಿಘಟಿತ ಕಂಪನಿಯ ಅಡಿಯಲ್ಲಿ ಹೊಂದಿದ್ದಂಥವೇ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಲ್ಲಿ ಪದಧಾರಣ ಮಾಡತಕ್ಕದ್ದು ಅಥವಾ ಸೇವೆಯಲ್ಲಿರತಕ್ಕದ್ದು, ಮತ್ತು ಅವನ ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ಮಂಡಲಿಯು ಕ್ರಮಬದ್ಧವಾಗಿ ಬದಲಾಯಿಸಿದ ಹೊರತು ಮತ್ತು ಬದಲಾಯಿಸುವವರೆಗೆ ಹಾಗೆ ಮಾಡುವುದು ಮುಂದುವರಿಯತಕ್ಕದ್ದು.

**19. ಕಾರ್ಯನಿರ್ವಹಣೆಯಲ್ಲಿ ಗರಿಷ್ಠ ದಕ್ಷತೆಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಸಂಘಟನಾತ್ಮಕ ಮತ್ತು ಅಧಿಕಾರಾತ್ಮಕ ವ್ಯವಸ್ಥೆಯನ್ನು ಪುನಾರಚಿಸಲು ಮತ್ತು ಆಧುನೀಕರಣಗೊಳಿಸಲು ಮಂಡಲಿಯ ಅಧಿಕಾರ.**- (1) ಈ ಅಧ್ಯಾಯದಲ್ಲಿ ಏನೇ ಅಡಕವಾಗಿದ್ದಾಗ್ಯೂ, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಕಾರ್ಯನಿರ್ವಹಣೆಯಲ್ಲಿ ಗರಿಷ್ಠ ದಕ್ಷತೆಯನ್ನು ಸುನಿಶ್ಚಿತಗೊಳಿಸಲು, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಸಂಘಟನಾತ್ಮಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಪುನಾರಚಿಸುವುದಕ್ಕಾಗಿ ಮತ್ತು ಆಧುನೀಕರಣಗೊಳಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ಆದೇಶಗಳನ್ನು ಮಾಡಬಹುದು ಅಥವಾ ಅಂಥ ಕ್ರಮವನ್ನು ಕೈಗೊಳ್ಳಬಹುದು ಮತ್ತು ಆ ಮಂಡಲಿಯು, ಈ ಉದ್ದೇಶವನ್ನು ಸಾಧಿಸುವುದಕ್ಕಾಗಿ, ಯಾವನೇ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಅಥವಾ ಅಧಿಕಾರಿಗಳ ಅಥವಾ ನೌಕರರ ಯಾವುದೇ ವರ್ಗವನ್ನು, ಅವರು ಹೆಚ್ಚುವರಿಯಾಗಿರುವ ಅಥವಾ ಅನ್ಯಥಾ ಅದೇ ಸ್ವರೂಪದ ಹುದ್ದೆಗಳ ಪುನರಾವರ್ತನೆಗಳು ಇರುವ ಅಥವಾ ಪರಿಷ್ಕೃತ ರಚನೆಯಲ್ಲಿ ಆ ಹುದ್ದೆಗೆ ಅಗತ್ಯಪಡಿಸಲಾದ ವಿಶೇಷ ತಜ್ಞತೆ, ವ್ಯವಸ್ಥೆ ಅಥವಾ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಒಂದು ನಿರ್ದಿಷ್ಟ ಕಚೇರಿಯಲ್ಲಿ ಅಥವಾ ಘಟಕದಲ್ಲಿ ಹುದ್ದೆಗಳು ಲಭ್ಯವಿಲ್ಲದಿರುವ ಮತ್ತು ಆ ನಿರ್ದಿಷ್ಟ ದರ್ಜೆಯಲ್ಲಿ ಅದೇ ಬಗೆಯ ಹುದ್ದೆಯಲ್ಲಿ ಅವನನ್ನು ನಿಯೋಜಿಸುವುದು ಕಾರ್ಯಸಾಧ್ಯವಾಗದ ಕಾರಣದಿಂದಾಗಿ ಅವಶ್ಯಕತೆಗಿಂತ ಹೆಚ್ಚಿಗೆ ಇರುವವರು ಎಂದು ಘೋಷಿಸಲು ಸಕ್ಷಮವಾಗಿರತಕ್ಕದ್ದು.

(2) ಈ ಅಧ್ಯಾಯದಲ್ಲಿರುವುದು ಯಾವುದೂ, ಮಂಡಲಿಗೆ ವರ್ಗಾವಣೆಗೊಂಡ ಅಧಿಕಾರಿಗಳ ಮತ್ತು ಇತರ ನೌಕರರ ಸೇವಾ ಷರತ್ತುಗಳನ್ನು ಸುವ್ಯವಸ್ಥಿತಗೊಳಿಸುವ ಉದ್ದೇಶಕ್ಕಾಗಿ ಅವಶ್ಯವೆಂದು ಪರ್ಯಾಲೋಚಿಸಿದರೆ, ಅವರ ಪದನಾಮ, ಸೇವಾ ಷರತ್ತುಗಳು ಅಥವಾ ಅವರಿಗೆ ಅನ್ವಯವಾಗುವ ವೇತನ ಶ್ರೇಣಿಗಳನ್ನು ಬದಲಾಯಿಸಲು ಅಥವಾ ಅವರ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ಪುನಃ ಹಂಚಲು ಆ ಮಂಡಲಿಯನ್ನು ಅಡ್ಡಿಪಡಿಸತಕ್ಕದ್ದಲ್ಲ.

**20. ಅವಶ್ಯಕತೆಗಿಂತ ಹೆಚ್ಚಿಗೆ ಇರುವ ನೌಕರರಿಗೆ ನಷ್ಟ ಪರಿಹಾರ ಮುಂತಾದವುಗಳಿಗೆ ಸಂಬಂಧಪಟ್ಟ ಯೋಜನೆಗಳು.**- (1) 19ನೇ ಪ್ರಕರಣದ ಅನುಸರಣೆಯಲ್ಲಿ ಅವಶ್ಯಕತೆಗಿಂತ ಹೆಚ್ಚಿಗೆ ಇರುವವರೆಂದು ಘೋಷಿಸಲಾಗಿರುವ ಅಧಿಕಾರಿಗಳು ಅಥವಾ ಇತರ ನೌಕರರೊಂದಿಗೆ ಆ ಮಂಡಲಿಯು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಈ ಬಗ್ಗೆ ಮಾಡಬಹುದಾದಂಥ ಯೋಜನೆಯ ಅಥವಾ ಯೋಜನೆಗಳ ಅನುಸಾರ ವ್ಯವಹರಿಸತಕ್ಕದ್ದು ಮತ್ತು ಬೇರೆ ಬೇರೆ ವರ್ಗಗಳ ಅಥವಾ ಪ್ರವರ್ಗಗಳ ಅಧಿಕಾರಿಗಳು ಮತ್ತು ಇತರ ನೌಕರರಿಗೆ ಸಂಬಂಧಿಸಿದಂತೆ ಬೇರೆ ಬೇರೆ ಯೋಜನೆಗಳನ್ನು ಮಾಡಬಹುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯೋಜನೆ ಅಥವಾ ಯೋಜನೆಗಳು,-

(ಎ) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾರೇ ಅಧಿಕಾರಿ ಅಥವಾ ಇತರೆ ನೌಕರನಿಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರದ ಪ್ರಮಾಣ ಮತ್ತು ಅದನ್ನು ಸಂದಾಯ ಮಾಡುವ ವಿಧಾನ:

ಪರಂತು, ಹಾಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರವು ಯಾವುದೇ ಸಂದರ್ಭದಲ್ಲಿ, ಅವನನ್ನು ಸೇವೆಯಿಂದ ವಿಮುಕ್ತಗೊಳಿಸಿದ್ದರೆ ಅವನಿಗೆ ಅನ್ವಯವಾಗುವ ಸೇವಾ ಷರತ್ತುಗಳ ಮೇರೆಗೆ ಆವನಿಗೆ ಸಂದಾಯವಾಗಬಹುದಾಗಿದ್ದುದಕ್ಕಿಂತ ಕಡಿಮೆಯಾಗಿರತಕ್ಕದ್ದಲ್ಲ;

(ಬಿ) ಅವರಿಗೆ ಅನ್ವಯವಾಗುವ ಸೇವಾ ಷರತ್ತುಗಳಿಗೆ ಅನುಸಾರವಾಗಿ ಸಂದಾಯ ಮಾಡಬಹುದಾದ ಸಂಬಳದ ಬಾಕಿಗಳ ಪ್ರಮಾಣ ಅಥವಾ ಇತರ ಉಪಲಬ್ಧಿಗಳು, ಭವಿಷ್ಯನಿಧಿ, ಉಪದಾನ ಅಥವಾ ಇತರ ಯಾವುದೇ ಮೊಬಲಗು;

(ಸಿ) ಅವಶ್ಯಕತೆಗಿಂತ ಹೆಚ್ಚಿನವರಾಗಿದ್ದು ಬಾಧಿತರಾದ ಅಧಿಕಾರಿಗಳು ಮತ್ತು ಇತರ ನೌಕರರು ಅಪೀಲು ಮಾಡಿಕೊಳ್ಳುವ ಬಗ್ಗೆ ಮತ್ತು ಕೃಷಿಗೆ ಸಂಬಂಧಪಟ್ಟ ಮಂತ್ರಾಲಯದಲ್ಲಿ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಯಾಗಿರುವ ಅಪೀಲು ಪ್ರಾಧಿಕಾರದ ಬಗ್ಗೆ;

(ಡಿ) ಅವರನ್ನು ಅವಶ್ಯಕತೆಗಿಂತ ಹೆಚ್ಚಿನವರೆಂದು ಘೋಷಿಸಲಾಗಿರುವುದರಿಂದ ಸೇವೆಯ ಕೊನೆಗೊಳಿಸುವಿಕೆಗೆ ಸಂಬಂಧಪಟ್ಟ ಯಾವುದೇ ಇತರ ವಿಷಯ;

- ಇವುಗಳ ಬಗ್ಗೆ ಉಪಬಂಧಿಸಬಹುದು.

**21. ನೌಕರರ ವರ್ಗಾವಣೆಗಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡದಿರುವುದು.**- ಹೈನುಗಾರಿಕೆ ಅಭಿವೃದ್ಧಿ ಮಂಡಲಿಗೆ ಸಂಘ ಅಥವಾ ವಿಘಟಿತ ಕಂಪನಿಯ ಯಾರೇ ಅಧಿಕಾರಿ ಅಥವಾ ಇತರೆ ನೌಕರನ ಸೇವೆಗಳನ್ನು ವರ್ಗಾಯಿಸುವುದು, ಯಾರೇ ಅಂಥ ಅಧಿಕಾರಿ ಅಥವಾ ಇತರೆ ನೌಕರನನ್ನು ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನ ಮೇರೆಗೆ, ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುದಾರನನ್ನಾಗಿಸತಕ್ಕದ್ದಲ್ಲ ಮತ್ತು ಯಾವುದೇ ಅಂಥ ಕ್ಲೇಮನ್ನು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಪುರಸ್ಕರಿಸತಕ್ಕದ್ದಲ್ಲ.

**22. ಭವಿಷ್ಯನಿಧಿ, ಉಪದಾನ, ಕಲ್ಯಾಣ ನಿಧಿ ಮತ್ತು ಇತರೆ ನಿಧಿಗಳು.**- (1) ಸಂಘ ಅಥವಾ ವಿಘಟಿತ ಕಂಪನಿ ಇವೆರಡಕ್ಕೂ ಸಂಬಂಧಿಸಿದಂತೆ, ಅಧಿಕಾರಿಗಳು ಅಥವಾ ಇತರ ನೌಕರರ ಪ್ರಯೋಜನಕ್ಕಾಗಿ ಭವಿಷ್ಯ ನಿಧಿಯನ್ನು ಸ್ಥಾಪಿಸಿರುವಲ್ಲಿ ಮತ್ತು ಅದು ಒಂದು ನ್ಯಾಸದಲ್ಲಿ ನಿಹಿತ ಗೊಂಡಿರುವಲ್ಲಿ ಪ್ರತಿಯೊಂದು ಭವಿಷ್ಯ ನಿಧಿಯ ಲೆಕ್ಕದಲ್ಲಿರುವ ಹಣಗಳು ಮತ್ತು ಇತರ ಆಸ್ತಿಗಳನ್ನು ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದ ಅಂಥ ನ್ಯಾಸಧಾರಿಗಳು, ನ್ಯಾಸ ಪತ್ರಗಳ ಉಪಬಂಧಗಳು ಮತ್ತು ಆಯಾ ನ್ಯಾಸಗಳಿಗೆ ಸಂಬಂಧಪಟ್ಟ ನಿಯಮಗಳಿಗೊಳಪಟ್ಟು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಅನ್ಯಥಾ ನಿರ್ದೇಶಿಸುವವರೆಗೆ ಮತ್ತು ನಿರ್ದೇಶಿಸಿದ ಹೊರತು, ಆಯಾ ಭವಿಷ್ಯನಿಧಿಗೆ ಸಂಬಂಧಿಸಿದಂತೆ ನ್ಯಾಸಧಾರಿಗಳಾಗಿ ಕಾರ್ಯನಿರ್ವಹಿಸುವುದು ಮುಂದುವರಿಯತಕ್ಕದ್ದು, ಮತ್ತು ಸದರಿ ನ್ಯಾಸಗಳಿಗೆ ಸಂಬಂಧಪಟ್ಟ ಹಕ್ಕುಗಳು ಗೊತ್ತುಪಡಿಸಿದ ದಿವಸದಿಂದ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಲ್ಲಿ ನಿಹಿತವಾಗಿರತಕ್ಕದ್ದು.

(2) ಸಂಘ ಅಥವಾ ವಿಘಟಿತ ಕಂಪನಿಯು ತನ್ನ ಅಧಿಕಾರಿಗಳು ಅಥವಾ ಇತರ ನೌಕರರ ಪ್ರಯೋಜನಕ್ಕಾಗಿ ಯಾವುದೇ ಉಪದಾನವನ್ನು, ಕಲ್ಯಾಣ ನಿಧಿಯನ್ನು ಅಥವಾ ಇತರೆ ನಿಧಿಯನ್ನು ಸ್ಥಾಪಿಸಿರುವಲ್ಲಿ ಮತ್ತು ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ ಅದು ಅಸ್ತಿತ್ವದಲ್ಲಿರುವಲ್ಲಿ ಅಂಥ ಉಪದಾನ, ಕಲ್ಯಾಣನಿಧಿ ಅಥವಾ ಇತರೆ ನಿಧಿಯ ಲೆಕ್ಕಕ್ಕೆ ಅಥವಾ ಅದಕ್ಕೆ ಸಂಬಂಧಪಟ್ಟ ಹಾಗೆ ಇರುವ ಎಲ್ಲಾ ಹಣಗಳು ಮತ್ತು ಇತರ ಆಸ್ತಿಗಳು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಲ್ಲಿ ನಿಹಿತವಾಗಿರತಕ್ಕದ್ದು.

(3) (1) ಮತ್ತು (2)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಮಂಡಲಿಯು, ಅಂಥ ನ್ಯಾಸಗಳು ಅಥವಾ ನಿಧಿಗಳಲ್ಲಿ ಭಾಗಶಃ ಅಥವಾ ಪೂರ್ಣವಾಗಿ ಏಕರೂಪತೆಯನ್ನು ತರಲು ಅಥವಾ ಐಕ್ಯತೆಯನ್ನು ಉಂಟುಮಾಡಲು ಅದು ಸೂಕ್ತವೆಂದು ಭಾವಿಸಬಹುದಾದಂಥ ನ್ಯಾಸಗಳು ಅಥವಾ ನಿಧಿಗಳಿಗೆ ಸಂಬಂಧಪಟ್ಟಂತೆ ಅಂಥ ನಿರ್ದೇಶನಗಳನ್ನು ಕೊಡಬಹುದು ಅಥವಾ ಅಂಥ ಇತರೆ ಕ್ರಮವನ್ನು ಕೈಗೊಳ್ಳಬಹುದು.

(4) ಮಂಡಲಿಯು, ಅಧಿಕಾರಿಗಳು ಮತ್ತು ಇತರ ನೌಕರರು ಅಥವಾ ಅವರ ಕುಟುಂಬಗಳ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಅವರ ಆರೋಗ್ಯ, ಶಿಕ್ಷಣ ಅಥವಾ ಇತರೆ ಹಿತಾಸಕ್ತಿಗಳ ಅಭಿವೃದ್ಧಿಗಾಗಿ ನಿಯಮಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಆ ಉದ್ದೇಶಕ್ಕಾಗಿ ಅಗತ್ಯಪಡಿಸಬಹುದಾದಂಥ ಸಂಸ್ಥೆಗಳನ್ನು ಸೃಜಿಸಬಹುದು.

(5) ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳಲ್ಲಿರುವುದು ಯಾವುದೂ, ಮಂಡಲಿಯ ಯಾರೇ ಅಧಿಕಾರಿಗಳು ಅಥವಾ ಇತರ ನೌಕರರಿಗಾಗಿ ಯಾವುದೇ ಭವಿಷ್ಯನಿಧಿ, ಕಲ್ಯಾಣ ನಿಧಿ, ಉಪದಾನ ಅಥವಾ ಇತರೆ ನಿಧಿಯನ್ನು ಸ್ಥಾಪಿಸುವುದಕ್ಕಾಗಿ ಅಥವಾ ನಿರ್ವಹಿಸುವುದಕ್ಕಾಗಿ ವಿನಿಯಮಗಳನ್ನು ರಚಿಸುವ ಮಂಡಲಿಯ ಅಧಿಕಾರವನ್ನು ಅಲ್ಪೀಕರಿಸತಕ್ಕದ್ದಲ್ಲ.

## ಅಧ್ಯಾಯ -VI

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ

**23. ಸಾಲ ತೆಗೆದುಕೊಳ್ಳಲು ಮಂಡಲಿಯ ಅಧಿಕಾರಗಳು.**- ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಯೊಂದಿಗೆ ಅಥವಾ ಕೇಂದ್ರ ಸರ್ಕಾರವು ಅದಕ್ಕೆ ಕೊಟ್ಟ ಯಾವುದೇ ಸಾಮಾನ್ಯ ಅಥವಾ ವಿಶೇಷ ಅಧಿಕಾರದ ನಿಬಂಧನೆಗಳಿಗೆ ಅನುಸಾರವಾಗಿ, ಈ ಅಧಿನಿಯಮದ ಮೇರೆಗಿನ ಅದರ ಎಲ್ಲಾ ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸುವುದಕ್ಕಾಗಿ ಅದು ಸೂಕ್ತವೆಂದು ಭಾವಿಸಬಹುದಾದ ಯಾವುದೇ ಮೂಲದಿಂದ ಹಣವನ್ನು ಸಾಲ ತೆಗೆದುಕೊಳ್ಳಬಹುದು.

**24. ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು.**- ಕೇಂದ್ರ ಸರ್ಕಾರವು ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತು ಮಾಡಿದ ಕ್ರಮಬದ್ಧ ವಿನಿಯೋಗದ ತರುವಾಯ ಅನುದಾನಗಳ ಅಥವಾ ಸಾಲಗಳ ರೂಪದಲ್ಲಿ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಗೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಉಪಯೋಗಿಸುವುದಕ್ಕಾಗಿ, ಕೇಂದ್ರ ಸರ್ಕಾರವು ಸೂಕ್ತವೆಂದು ಯೋಚಿಸಬಹುದಾದಂಥ ಮೊತ್ತಗಳನ್ನು ಸಂದಾಯ ಮಾಡಬಹುದು.

**25. ಅನುದಾನಗಳು, ದೇಣಿಗೆಗಳು ಮುಂತಾದವುಗಳು.**- (1) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಸರ್ಕಾರದಿಂದ ಅಥವಾ ಭಾರತದಲ್ಲಿನ ಅಥವಾ ಹೊರಗಿನ ಯಾವುದೇ ಇತರ ಮೂಲದಿಂದ ಕೊಡುಗೆಗಳು, ಅನುದಾನಗಳು, ದೇಣಿಗೆಗಳು ಅಥವಾ ಉಪಕಾರ ಧನಗಳನ್ನು ಸ್ವೀಕರಿಸಬಹುದು ಮತ್ತು ಅವುಗಳನ್ನು ಮಂಡಲಿಯು ಈ ಅಧಿನಿಯಮದ ಮೇರೆಗಿನ ಅದರ ಪ್ರಕಾರ್ಯಗಳನ್ನು ಚಲಾಯಿಸುವುದಕ್ಕಾಗಿ ಮತ್ತು ಅದರ ಹೊಣೆಗಾರಿಕೆಗಳನ್ನು ನಿರ್ವಹಿಸುವುದಕ್ಕಾಗಿ ಉಪಯೋಗಿಸತಕ್ಕದ್ದು.

(2) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಕೇಂದ್ರ ಸರ್ಕಾರದ ಪೂರ್ವಾನುಮತಿಯೊಂದಿಗೆ ಹೊರತು, ವಿದೇಶಿ ಸರ್ಕಾರ ಅಥವಾ ಭಾರತದ ಹೊರಗಿನ ಇತರ ಯಾವುದೇ ಮೂಲದಿಂದ ಯಾವುವೇ ಕೊಡುಗೆಗಳು, ಅನುದಾನಗಳು, ದೇಣಿಗೆಗಳು ಅಥವಾ ಉಪಕಾರ ಧನಗಳನ್ನು ಸ್ವೀಕರಿಸತಕ್ಕದ್ದಲ್ಲ.

**26. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ ನಿಧಿ.**- (1) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ ನಿಧಿಯೆಂದು ಕರೆಯಲಾಗುವ ನಿಧಿಯನ್ನು ನಿರ್ವಹಿಸತಕ್ಕದ್ದು ಮತ್ತು, ಅದಕ್ಕೆ ಈ ಕೆಳಕಂಡವುಗಳನ್ನು ಜಮೆ ಮಾಡತಕ್ಕದ್ದು,-

(ಎ) IIನೇ ಅಧ್ಯಾಯದ ಮೇರೆಗೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಲ್ಲಿ ನಿಹಿತವಾದ ಹಣದ ಎಲ್ಲಾ ಮೊತ್ತಗಳು;

(ಬಿ) ಸರ್ಕಾರವು ಒದಗಿಸಬಹುದಾದ ಹಣದ ಎಲ್ಲಾ ಮೊತ್ತಗಳು;

(ಸಿ) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಸ್ವೀಕರಿಸಿದ ಎಲ್ಲಾ ಫೀಜುಗಳು ಮತ್ತು ಇತರ ವೆಚ್ಚಗಳು;

(ಡಿ) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಿಂದ ಕೊಡುಗೆ, ಸರಕುಗಳಿಂದ ಒದಗಿಬಂದ ಅಥವಾ ಅದು ಅನುದಾನಗಳು, ದೇಣಿಗೆಗಳು, ಉಪಕಾರ ಧನಗಳು, ಮರಣಶಾಸನ ದಾನಗಳು ಅಥವಾ ವರ್ಗಾವಣೆಗಳ ಮೂಲಕ ಸ್ವೀಕರಿಸಿದ ಹಣದ ಎಲ್ಲಾ ಮೊತ್ತಗಳು; ಮತ್ತು

(ಇ) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಯಾವುದೇ ಇತರ ರೀತಿಯಲ್ಲಿ ಅಥವಾ ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಹಣದ ಎಲ್ಲಾ ಮೊತ್ತಗಳು.

(2) ಸದರಿ ನಿಧಿಗೆ ಜಮೆ ಮಾಡಿದ ಹಣದ ಎಲ್ಲಾ ಮೊತ್ತಗಳನ್ನು, ಈ ಬಗ್ಗೆ ರಚಿಸಿದ ವಿನಿಯಮಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಭಾರತ ಸ್ಟೇಟ್ ಬ್ಯಾಂಕ್ ಅಥವಾ ಯಾವುದೇ ಇತರ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು.

**ವಿವರಣೆ.**- ಈ ಉಪಪ್ರಕರಣದಲ್ಲಿ "ರಾಷ್ಟ್ರೀಕೃತ ಬ್ಯಾಂಕ್" ಎಂದರೆ, ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (1970ರ 5) ಮತ್ತು ಬ್ಯಾಂಕಿಂಗ್

ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1980 (1980ರ 40) ಇವುಗಳಲ್ಲಿ ಪರಿಭಾಷಿಸಿದಂಥ ಹೊಸ ಸಂವಾದಿ ಬ್ಯಾಂಕು;

(3) ಸದರಿ ನಿಧಿಯನ್ನು 16ನೇ ಪ್ರಕರಣದ ಮೇರೆಗೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ಪ್ರಕಾರ್ಯಗಳು ಮತ್ತು ಹೊಣೆಗಾರಿಕೆಗಳನ್ನು ನಿರ್ವಹಿಸುವಲ್ಲಿ ಅಥವಾ ಅದರಲ್ಲಿ ಉಲ್ಲೇಖಿಸಿರುವ ಯಾವುದೇ ಚಟುವಟಿಕೆಗೆ ಸಂಬಂಧಪಟ್ಟಂತೆ ಅಥವಾ ಅದಕ್ಕೆ ಸಂಬಂಧಪಡಬಹುದಾದ ಯಾವುದೇ ಕಾರ್ಯಕ್ಕಾಗಿ ವಹಿಸಿದ ವೆಚ್ಚಗಳನ್ನು ಒಳಗೊಂಡು, ಅದರ ಆಡಳಿತಾತ್ಮಕ ಮತ್ತು ಇತರ ವೆಚ್ಚಗಳನ್ನು ಭರಿಸುವ ಬಗ್ಗೆ ವಿನಿಯೋಗಿಸತಕ್ಕದ್ದು.

**27. ಲೆಕ್ಕಪತ್ರಗಳು ಮತ್ತು ಆಯವ್ಯಯ ಪಟ್ಟಿಯನ್ನು ಸಿದ್ಧಪಡಿಸುವುದು.**- (1) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಆಯವ್ಯಯ ಪಟ್ಟಿ ಮತ್ತು ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ತಯಾರಿಸತಕ್ಕದ್ದು.

(2) ಮಂಡಲಿಯು, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಪುಸ್ತಕಗಳು ಮತ್ತು ಲೆಕ್ಕಪತ್ರಗಳನ್ನು ಪ್ರತಿವರ್ಷದ ಮಾರ್ಚ್ 31ನೇ ದಿವಸದಂದು ಅಥವಾ ಕೇಂದ್ರ ಸರ್ಕಾರದ ಸಹಮತಿ ಪಡೆದು ಮಂಡಲಿಯು ತೀರ್ಮಾನಿಸಬಹುದಾದಂಥ ಇತರ ದಿನಾಂಕದಂದು ಇರುವ ಹಾಗೆ ಮುಕ್ತಾಯಗೊಳಿಸುವ ಮತ್ತು ಸರಿದೂಗಿಸುವ ವ್ಯವಸ್ಥೆ ಮಾಡಿಸತಕ್ಕದ್ದು.

**28. ಲೆಕ್ಕ ಪರಿಶೋಧನೆ.**- (1) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಲೆಕ್ಕಪತ್ರಗಳನ್ನು ಕಂಪನಿಗಳ ಅಧಿನಿಯಮದ ಮೇರೆಗೆ ಕಂಪನಿಗಳ ಲೆಕ್ಕಪರಿಶೋಧಕರೆಂದು ಕೆಲಸಮಾಡಲು ಕ್ರಮಬದ್ಧವಾಗಿ ಅರ್ಹತೆ ಪಡೆದ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅವರಿಗೆ ಸಂದಾಯ ಮಾಡಬೇಕಾದ ಪರಿಶ್ರಮ ಧನವು ಕೇಂದ್ರ ಸರ್ಕಾರದ ಅನುಮೋದನೆಗೆ ಒಳಪಟ್ಟಿರತಕ್ಕದ್ದು.

(2) ಪ್ರತಿಯೊಬ್ಬ ಲೆಕ್ಕಪರಿಶೋಧಕನು ತನ್ನ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಎಲ್ಲಾ ಯುಕ್ತ ಕಾಲಗಳಲ್ಲಿ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಪುಸ್ತಕಗಳು, ಲೆಕ್ಕಪತ್ರಗಳು ಮತ್ತು ಇತರ ದಸ್ತಾವೇಜುಗಳನ್ನು ನೋಡುವ ಅವಕಾಶವನ್ನು ಹೊಂದಿರತಕ್ಕದ್ದು.

(3) ಲೆಕ್ಕಪರಿಶೋಧಕರು ವರದಿಯನ್ನು ಮಂಡಲಿಗೆ ಒಪ್ಪಿಸತಕ್ಕದ್ದು ಮತ್ತು ಮಂಡಲಿಯು ವರದಿಯ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**29. ವರದಿಗಳನ್ನು ಸಂಸತ್ತಿನ ಮುಂದೆ ಇಡುವುದು.**- ಕೇಂದ್ರ ಸರ್ಕಾರವು 28ನೇ ಪ್ರಕರಣದ ಮೇರೆಗಿನ ಲೆಕ್ಕಪರಿಶೋಧಕರ ವರದಿಯನ್ನು, ಅದನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ ಅದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು.

**30. ಒಪ್ಪಿಕೊಂಡ ಅವಧಿಗೆ ಮುಂಚೆ ಮರುಸಂದಾಯ ಮಾಡುವುದಕ್ಕಾಗಿ ಕೋರುವ ಅಧಿಕಾರ.**- ಯಾವುದೇ ಒಪ್ಪಂದದಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಮಂಡಲಿಯು, ಯಾವ ವ್ಯಕ್ತಿಗೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ ಅಥವಾ ಸಂಘ ಅಥವಾ ವಿಘಟಿತ ಕಂಪನಿಯು ಯಾವುದೇ ಸಾಲ ಅಥವಾ ಮುಂಗಡವನ್ನು ಕೊಟ್ಟಿರುವುದೋ ಆ ಯಾವನೇ ವ್ಯಕ್ತಿಯನ್ನು,-

(ಎ) ಸಾಲ ಅಥವಾ ಮುಂಗಡಕ್ಕಾಗಿ ಸಲ್ಲಿಸಿದ ಅರ್ಜಿಯಲ್ಲಿ ಯಾವುದೇ ಮುಖ್ಯ ವಿವರದಲ್ಲಿ ಯಾವುದೇ ಸುಳ್ಳು ಅಥವಾ ತಪ್ಪು ದಾರಿಗೆಳೆಯುವ ಮಾಹಿತಿಯನ್ನು ಕೊಡಲಾಗಿದೆಯೆಂದು ಮಂಡಲಿಗೆ ಕಂಡುಬಂದರೆ; ಅಥವಾ

(ಬಿ) ಆ ವ್ಯಕ್ತಿಯು ಸಾಲ ಅಥವಾ ಮುಂಗಡದ ವಿಷಯದಲ್ಲಿ ಅದರ ಕರಾರಿನ ನಿಬಂಧನೆಗಳನ್ನು ಪಾಲಿಸಲು ತಪ್ಪಿದರೆ; ಅಥವಾ

(ಸಿ) ಆ ವ್ಯಕ್ತಿಯು ಅವನ ಋಣಗಳನ್ನು ಸಂದಾಯ ಮಾಡಲು ಅಸಮರ್ಥನಾಗಿದ್ದಾನೆಂದು ಅಥವಾ ಅದಕ್ಕೆ ಸಂಬಂಧಿಸಿದಂತೆ ಸಮಾಪನದ ವ್ಯವಹರಣೆಗಳನ್ನು ಪ್ರಾರಂಭಿಸಬಹುದೆಂಬ ಯುಕ್ತ ಶಂಕೆ ಇದ್ದರೆ; ಅಥವಾ

(ಡಿ) ಸಾಲ ಅಥವಾ ಮುಂಗಡಕ್ಕಾಗಿ ಭದ್ರತೆ ಎಂದು ಒತ್ತೆಯಿಟ್ಟ, ಅಡಮಾನ ಮಾಡಿದ, ಆಧಾರ ಮಾಡಿದ ಅಥವಾ ಹಸ್ತಾಂತರಿಸಿದ ಆ ಸ್ವತ್ತನ್ನು ಮಂಡಲಿಗೆ ಸಮಾಧಾನವಾಗುವ ಹಾಗೆ ಆ ವ್ಯಕ್ತಿಯು ವಿಮೆ ಮಾಡಿಸಿಲ್ಲದಿದ್ದರೆ ಮತ್ತು ವಿಮೆ ಮಾಡಿಸಿಟ್ಟಿಲ್ಲದಿದ್ದರೆ ಅಥವಾ ಅದು ಮಂಡಲಿಯ ಅಭಿಪ್ರಾಯದಲ್ಲಿ ಮಂಡಲಿಗೆ ಸಮಾಧಾನವಾಗುವ ಹಾಗೆ ಇನ್ನೂ ಹೆಚ್ಚಿನ ಭದ್ರತೆಯನ್ನು ಕೊಡಬೇಕಾಗುವಷ್ಟರ ಮಟ್ಟಿಗೆ ಮೌಲ್ಯದಲ್ಲಿ ಇಳಿತಾಯವಾಗಿದ್ದರೆ ಮತ್ತು ತಗಾದೆ ಮಾಡಿದ ತರುವಾಯ ಅಂಥ ಭದ್ರತೆಯನ್ನು ಕೊಡದಿದ್ದರೆ; ಅಥವಾ

(ಇ) ಯುಕ್ತ ಅನುಮತಿಯಿಲ್ಲದೆ ಯಾವುದೇ ಯಂತ್ರ ಸಾಮಗ್ರಿ, ಸ್ಥಾವರ ಅಥವಾ ಸಾಮಗ್ರಿಯನ್ನು (ಭದ್ರತೆಯ ಭಾಗವಾಗಿರುವುದೇ ಆಗಿರಲಿ ಅಥವಾ ಆಗಿಲ್ಲದಿರಲಿ) ಅದನ್ನು ಪ್ರತಿಸ್ಥಾಪಿಸಿದ ಸಂಬಂಧಪಟ್ಟ ಆವರಣದಿಂದ ಸ್ಥಳಾಂತರಿಸಿದರೆ; ಅಥವಾ

(ಎಫ್) ಸರಕುಗಳ ಸರಬರಾಜು ಅಥವಾ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಪಟ್ಟ ಸಾಲದ ಒಪ್ಪಂದದಲ್ಲಿನ ಯಾವುದೇ ಷರತ್ತನ್ನು ಗಮನಾರ್ಹವಾಗಿ ಉಲ್ಲಂಘಿಸಲಾಗುತ್ತಿದೆ ಎಂದು ಮಂಡಲಿಗೆ ಕಂಡುಬಂದರೆ; ಅಥವಾ

(ಜಿ) ಯಾವುದೇ ಇತರ ಕಾರಣಕ್ಕಾಗಿ ಮಂಡಲಿಯು, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಹಿತಾಸಕ್ತಿಗಳನ್ನು ಸಂರಕ್ಷಿಸುವುದಕ್ಕಾಗಿ ಹಾಗೆ ಮಾಡುವುದು ಅವಶ್ಯಕವೆಂದು ಪರ್ಯಾಲೋಚಿಸಿದರೆ - ಮಂಡಲಿಗೆ ಅದರ ಹೊಣೆಗಾರಿಕೆಗಳನ್ನು ಪೂರ್ಣವಾಗಿ ತಕ್ಷಣವೇ ತೀರಿಸಬೇಕೆಂದು ಲಿಖಿತ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

**31. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಕ್ಲೇಮುಗಳನ್ನು ಜಾರಿಗೊಳಿಸುವುದಕ್ಕಾಗಿ ವಿಶೇಷ ಉಪಬಂಧಗಳು.-** (1) ಯಾರೇ ವ್ಯಕ್ತಿಯು ಯಾವುದೇ ಒಪ್ಪಂದವನ್ನು ಉಲ್ಲಂಘಿಸಿ, ಯಾವುದೇ ಸಾಲ ಅಥವಾ ಮುಂಗಡದ ಅಥವಾ ಅದರ ಯಾವುದೇ ಕಂತನ್ನು ಮರುಸಂದಾಯ ಮಾಡುವಲ್ಲಿ (ಅಥವಾ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಕೊಟ್ಟಿರುವ ಖಾತರಿಗೆ ಸಂಬಂಧಪಟ್ಟಂತೆ ಅದರ ಬಾಧ್ಯತೆಗಳನ್ನು ಪೂರೈಸುವಲ್ಲಿ) ಯಾವುದೇ ತಪ್ಪಿತವನ್ನು ಮಾಡುವಲ್ಲಿ ಅಥವಾ ಮಂಡಲಿಯೊಂದಿಗೆ ಮಾಡಿಕೊಂಡ ಒಪ್ಪಂದದ ನಿಬಂಧನೆಗಳನ್ನು ಪಾಲಿಸಲು ಅನ್ಯಥಾ ತಪ್ಪಿದಲ್ಲಿ ಅಥವಾ ಆ ಮಂಡಲಿಯು 30ನೇ ಪ್ರಕರಣದ ಮೇರೆಗಿನ ಯಾವುದೇ ಸಾಲ ಅಥವಾ ಮುಂಗಡವನ್ನು ಕೂಡಲೇ ಮರುಸಂದಾಯ ಮಾಡುವಂತೆ ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಿರುವಲ್ಲಿ ಮತ್ತು ಆ ವ್ಯಕ್ತಿಯು ಅಂಥ ಮರುಸಂದಾಯವನ್ನು ಮಾಡಲು ತಪ್ಪಿರುವಲ್ಲಿ, ಆಗ, ಸ್ವತ್ತು ವರ್ಗಾವಣೆ ಅಧಿನಿಯಮ, 1882 (1882ರ 4)ರ 69ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಈ ಬಗ್ಗೆ ಮಂಡಲಿಯು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಿದ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಯಾರೇ ಅಧಿಕಾರಿಯು ಈ ಕೆಳಕಂಡ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಪರಿಹಾರಗಳಿಗಾಗಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು, ಎಂದರೆ,-

(ಎ) ಆ ಸಾಲ ಅಥವಾ ಮುಂಗಡಕ್ಕಾಗಿ ಭದ್ರತೆ ಎಂದು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಗೆ ಒತ್ತೆಯಿಟ್ಟ, ಅಡಮಾನ ಮಾಡಿದ, ಆಧಾರವಾಗಿಟ್ಟ ಅಥವಾ ಹಸ್ತಾಂತರಿಸಿದ ಸ್ವತ್ತಿನ ಮಾರಾಟದ ಆದೇಶಕ್ಕೆ; ಅಥವಾ

(ಬಿ) ಯಾವುದೇ ಸಂಘಟನೆಯ ವ್ಯವಸ್ಥಾಪನೆಯನ್ನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಗೆ ವರ್ಗಾಯಿಸುವುದು; ಅಥವಾ

(ಸಿ) ಯುಕ್ತ ಅನುಮತಿಯಿಲ್ಲದೆ ಸಂಘಟನೆಯ ಆವರಣದಿಂದ ಯಂತ್ರ ಸಾಮಗ್ರಿ ಅಥವಾ ಇತರ ಸಾಧನ ಸಾಮಗ್ರಿಯನ್ನು ಸ್ಥಳಾಂತರಿಸಲಾಗುತ್ತಿದೆಯೆಂಬ ಬಗ್ಗೆ ಶಂಕೆಯಿರುವಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ .

(2) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಮತ್ತು ಅದನ್ನು ವಿಲೆಮಾಡುವ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ - VII

### ಸಂಕೀರ್ಣ

**32. ನೇಮಕಾತಿಗಳಲ್ಲಿನ ದೋಷಗಳು, ಮಂಡಲಿಯ ಕಾರ್ಯಗಳು, ಮುಂತಾದವುಗಳನ್ನು ಅಸಿಂಧು ಗೊಳಿಸದಿರುವುದು.–** ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಲ್ಲಿ ಅಥವಾ ಸಂದರ್ಭಾನುಸಾರ ಅದರ ಯಾವುದೇ ಸಮಿತಿಯಲ್ಲಿ ಯಾವುದೇ ಸ್ಥಾನವು ಖಾಲಿ ಇರುವ ಅಥವಾ ಅವುಗಳ ರಚನೆಯಲ್ಲಿ ಯಾವುದೇ ದೋಷವಿರುವ ಕಾರಣಮಾತ್ರದಿಂದಲೇ ಮಂಡಲಿಯ ಅಥವಾ ಅದರ ಯಾವುದೇ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು ಪ್ರಶ್ನಿಸತಕ್ಕದ್ದಲ್ಲ.

**33. ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗೆ ರಕ್ಷಣೆ.–** ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಅಥವಾ ಕಾನೂನಿನ ಬಲವನ್ನು ಹೊಂದಿರುವ ಉಪಬಂಧದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವಂಥ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ನಷ್ಟ ಅಥವಾ ಹಾನಿಗಾಗಿ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ ಅಥವಾ ಆ ಮಂಡಲಿಯ ಯಾರೇ ಅಧಿಕಾರಿ ಅಥವಾ ಇತರ ನೌಕರನ ಅಥವಾ ಈ ಅಧಿನಿಯಮದ ಮೇರೆಗೆ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಲು ಮಂಡಲಿಯು ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**34. ನಿರ್ದೇಶಕರಿಗೆ ನಷ್ಟ ಭರ್ತಿ.–** ಪ್ರತಿಯೊಬ್ಬ ನಿರ್ದೇಶಕನಿಗೆ, ಅವನ ಉದ್ದೇಶಪೂರ್ವಕವಾಗಿ ಮಾಡಿದ ಕಾರ್ಯ ಅಥವಾ ತಪ್ಪಿತದಿಂದ ಉಂಟಾದ ನಷ್ಟ ಅಥವಾ ವೆಚ್ಚಗಳನ್ನು ಹೊರತುಪಡಿಸಿ, ಅವನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಅವನು ಮಾಡಿದ ಎಲ್ಲಾ ನಷ್ಟಗಳನ್ನು ಮತ್ತು ವಹಿಸಿದ ಎಲ್ಲ ವೆಚ್ಚಗಳನ್ನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ನಷ್ಟ ಭರ್ತಿ ಮಾಡಿಕೊಡತಕ್ಕದ್ದು.

**35. ನಂಬಿಕೆ ಮತ್ತು ರಹಸ್ಯದ ಬಗ್ಗೆ ಬಾಧ್ಯತೆ.–** (1) ಮಂಡಲಿಯು, ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅನ್ಯಥಾ ಅಗತ್ಯಪಡಿಸಿದ ಹೊರತು, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿ ಅಥವಾ ಸಂಘ ಅಥವಾ ವಿಘಟಿತ ಕಂಪನಿಗೆ ಅಥವಾ ಅದರ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಮಾಹಿತಿಯನ್ನು ಹೊರಗೆಡಹಲು ಯಾವ ಸಂದರ್ಭಗಳಲ್ಲಿ ಹಣಕಾಸು ಸಂಸ್ಥೆಗಳೊಳಗೆ ರೂಢಿಗತವಾಗಿರುವ ಕಾನೂನು ಅಥವಾ ಪದ್ಧತಿ ಮತ್ತು ಆಚರಣೆಗೆ ಅನುಸಾರವಾಗಿದೆಯೋ ಆ ಸಂದರ್ಭಗಳಲ್ಲಿ ಹೊರತು ಅಂಥ ಮಾಹಿತಿಯನ್ನು ಹೊರಗೆಡಹತಕ್ಕದ್ದಲ್ಲ.

(2) ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಪ್ರತಿಯೊಬ್ಬ ನಿರ್ದೇಶಕ, ಸಮಿತಿಯ ಸದಸ್ಯ, ಲೆಕ್ಕ ಪರಿಶೋಧಕ, ಅಧಿಕಾರಿ ಅಥವಾ ಇತರ ನೌಕರನು, ತನ್ನ ಕರ್ತವ್ಯಗಳನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ಅನುಸೂಚಿಯಲ್ಲಿ ತಿಳಿಸಿರುವ ನಮೂನೆಯಲ್ಲಿ ನಂಬಿಕೆ ಮತ್ತು ರಹಸ್ಯದ ಬಗ್ಗೆ ಘೋಷಣೆಯನ್ನು ಮಾಡತಕ್ಕದ್ದು.

**36. ಹೆಚ್ಚುವರಿ ಅಧಿಕಾರಿಗಳ ಮತ್ತು ಇತರ ನೌಕರರ ನೌಕರಿ ಭರ್ತಿ.–**Vನೇ ಅಧ್ಯಾಯದಲ್ಲಿ ಅಡಕವಾಗಿರುವುದು ಯಾವುದೂ, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ಅದು ಅಗತ್ಯ ಅಥವಾ ಅಪೇಕ್ಷಣೀಯವೆಂದು ಪರ್ಯಾಲೋಚಿಸಬಹುದಾದಷ್ಟು ಸಂಖ್ಯೆಯ ಹೆಚ್ಚಿನ ಹುದ್ದೆಗಳನ್ನು ಸೃಜಿಸುವ ಅಥವಾ ಅಂಥ ಸಂಖ್ಯೆಯ ಹೆಚ್ಚಿನ ಅಧಿಕಾರಿಗಳು ಅಥವಾ ಇತರ ನೌಕರರನ್ನು ನೇಮಕಮಾಡುವ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಹಕ್ಕಿಗೆ ಬಾಧಕವನ್ನುಂಟು ಮಾಡುವುದೆಂದು ಭಾವಿಸತಕ್ಕದ್ದಲ್ಲ ಮತ್ತು ಅಂಥ ಯಾರೇ ಅಧಿಕಾರಿ ಅಥವಾ ಇತರ ನೌಕರನನ್ನು ನೇಮಕ ಮಾಡುವಲ್ಲಿ ಪರಸ್ಪರ ಜ್ಯೇಷ್ಠತೆಯೂ ಸೇರಿದಂತೆ ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ಸಹ ಮಂಡಲಿಯು ನಿರ್ಧರಿಸಬಹುದು.

**37. ಕೇಂದ್ರ ಸರ್ಕಾರದ ಆದೇಶಗಳ ಮೂಲಕ ಮಾತ್ರವೇ ಸಮಾಪನ.–** ಕಂಪನಿಗಳ ಅಥವಾ ನಿಗಮಗಳ ಸಮಾಪನಕ್ಕೆ ಸಂಬಂಧಪಟ್ಟ ಯಾವುದೇ ಕಾನೂನಿನ ಯಾವುದೇ ಉಪಬಂಧವು ರಾಷ್ಟ್ರೀಯ

ಹೈನುಗಾರಿಕೆ ಅಭಿವೃದ್ಧಿ ಮಂಡಲಿಗೆ ಅನ್ವಯವಾಗತಕ್ಕದ್ದಲ್ಲ ಮತ್ತು ಅದನ್ನು ಕೇಂದ್ರ ಸರ್ಕಾರದ ಆದೇಶದ ಮೂಲಕ ಮತ್ತು ಅದು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಹೊರತು ಸಮಾಪನಕ್ಕೆ ಒಳಪಡಿಸತಕ್ಕದ್ದಲ್ಲ.

**38. ಕೇಂದ್ರ ಸರ್ಕಾರದಿಂದ ಕೆಲವು ಅಧಿಕಾರಗಳ ಪ್ರತ್ಯಾಯೋಜನೆ.**- (1) ಕೇಂದ್ರ ಸರ್ಕಾರವು, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಶಿಫಾರಸಿನ ಮೇಲೆ, (ಅಂಕಿಅಂಶಗಳು ಮತ್ತು ಸಂಬಂಧಪಟ್ಟ ಆಧಾರಾಂಶಗಳ ಸಂಗ್ರಹಣೆ ಮತ್ತು ಸಂಕಲನವನ್ನೂ ಒಳಗೊಂಡು) ಉತ್ಪಾದನೆ, ಸಂಗ್ರಹಣೆ, ಕ್ರಯ-ವಿಕ್ರಯ, ರಫ್ತು - ಆಮದು, ಗುಣಮಟ್ಟಗಳ ನಿರ್ವಹಣೆ ಅಥವಾ ಅಂಥವೇ ಚಟುವಟಿಕೆಗಳು - ಇವುಗಳನ್ನು ನಿಯಂತ್ರಿಸುವ ಮೂಲಕ ರಾಷ್ಟ್ರೀಯ ಕ್ಷೀರ ಜಾಲವನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಮತ್ತು ನಿರ್ದಿಷ್ಟವಾಗಿ ಹೈನುಗಾರಿಕೆ, ಆಹಾರ ಪದಾರ್ಥಗಳು ಮತ್ತು ಸಂಬಂಧಿತ ಕೈಗಾರಿಕೆಗಳಿಗೆ ಸಂಬಂಧಪಡಬಹುದಾದ ಕೇಂದ್ರ ಸರ್ಕಾರದ ಯಾವುದೇ ಚಟುವಟಿಕೆ ಅಥವಾ ಪ್ರಕಾರ್ಯವನ್ನು ಕೈಗೊಳ್ಳಲು ಅಥವಾ ನೆರವೇರಿಸಲು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯನ್ನು ಸಮರ್ಥಗೊಳಿಸುವ ಉದ್ದೇಶಕ್ಕಾಗಿ ಯಾವುದೇ ಯೋಜನೆಯನ್ನು ರಚಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವೆಂದು ಅದಕ್ಕೆ ಮನದಟ್ಟಾದರೆ ಹಾಗೆ ಯೋಜನೆಯನ್ನು ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ರೂಪಿಸಿದ ಪ್ರತಿಯೊಂದು ಯೋಜನೆಯನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ವಿಧಿಸಲು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳು, ನಿರ್ಬಂಧಗಳು ಅಥವಾ ಪರಿಮಿತಿಗಳು ಆ ಯೋಜನೆಯಲ್ಲಿ ಒಳಗೊಳ್ಳಬಹುದು.

**39. ಲೆಕ್ಕಪರಿಶೋಧಕರಿಗಾಗಿ ಸಂಧಿಕಾಲೀನ ಉಪಬಂಧಗಳು.**- ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂಘ ಅಥವಾ ವಿಘಟಿತ ಕಂಪನಿಗೆ ಸಂಬಂಧಪಟ್ಟಂತೆ ನೇಮಕಗೊಂಡ ಯಾರೇ ಲೆಕ್ಕ ಪರಿಶೋಧಕನನ್ನು ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಅವಧಿಯವರೆಗೆ ಮತ್ತು ಅಂಥ ನಿಬಂಧನೆಗಳ ಮೇಲೆ ಮುಂದುವರಿಸಬಹುದು.

**40. ಅಧ್ಯಕ್ಷ ಮತ್ತು ಮಂಡಲಿಗೆ ಸಂಬಂಧಿಸಿದಂತೆ ಸಂಧಿಕಾಲೀನ ಉಪಬಂಧಗಳು.**- ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ ಪದಧಾರಣ ಮಾಡುತ್ತಿದ್ದ ಸಂಘದ ಅಧ್ಯಕ್ಷನು, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಧ್ಯಕ್ಷನನ್ನು ನಾಮನಿರ್ದೇಶನ ಮಾಡುವವರೆಗೆ, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಅಧ್ಯಕ್ಷನಾಗಿರತಕ್ಕದ್ದು ಮತ್ತು ಅವನು ಈ ಅಧಿನಿಯಮದ ಮೇರೆಗೆ ಮಂಡಲಿಯನ್ನು ರಚಿಸುವವರೆಗೆ ಮಂಡಲಿಯ ಪ್ರಕಾರ್ಯಗಳನ್ನು ನೆರವೇರಿಸಲು ಸಕ್ಷಮನಾಗಿರತಕ್ಕದ್ದು.

**41. ವ್ಯವಸ್ಥಾಪನೆ ಅಥವಾ ಇತರರಿಗೆ ನೀಡುವ ನೆರವು ಮುಂದುವರಿಯುವುದು.**- ಗೊತ್ತುಪಡಿಸಿದ ದಿವಸಕ್ಕೆ ಮುಂಚೆ ಸಂಘವಾಗಲಿ ಅಥವಾ ವಿಘಟಿತ ಕಂಪನಿಯಾಗಲಿ ಯಾವುದೇ ಇತರ ಸಂಘಟನೆಯನ್ನು ವ್ಯವಸ್ಥಾಪನೆ ಮಾಡುತ್ತಿದ್ದರೆ ಅಥವಾ ಯಾವುದೇ ಸಂಘಟನೆಗೆ ಅಥವಾ ವ್ಯಕ್ತಿಗೆ ಯಾವುದೇ ತಾಂತ್ರಿಕ ಅಥವಾ ಇತರ ನೆರವನ್ನು ನೀಡುತ್ತಿದ್ದರೆ, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು ಅದೇ ಅಥವಾ ಅಂಥದೇ ಸೇವೆಯನ್ನು ಮಂಡಲಿಯು ಸೂಕ್ತವೆಂದು ಭಾವಿಸಬಹುದಾದಷ್ಟರ ಮಟ್ಟಿಗೆ, ಅಂಥ ಅವಧಿಗಾಗಿ ಮತ್ತು ಅಂಥ ಮಾರ್ಪಾಟುಗಳೊಂದಿಗೆ ಸಲ್ಲಿಸುವುದನ್ನು ಮುಂದುವರಿಸಬಹುದೆಂದು ಸಂದೇಹಗಳ ನಿವಾರಣೆಗಾಗಿ ಈ ಮೂಲಕ ಘೋಷಿಸಲಾಗಿದೆ.

**42. ಮದರ್‌ಡೈರಿಯು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಸಹಾಯಕ ಘಟಕ ವಾಗಿರತಕ್ಕದ್ದು.**- ದೆಹಲಿಯ ಮದರ್ ಡೈರಿ ಎಂದು ಕರೆಯಲಾಗುವ ಉದ್ಯಮವು ಗೊತ್ತುಪಡಿಸಿದ ದಿವಸದಂದು ಮತ್ತು ಅಂದಿನಿಂದ, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಸಹಾಯಕ ಘಟಕವಾಗಿರತಕ್ಕದ್ದು. ಆದರೆ ಮಂಡಲಿಯು, ಅನ್ಯಥಾ ತೀರ್ಮಾನಿಸಿದ ಹೊರತು, ಅದು ಅದರ ಪ್ರತ್ಯೇಕ ಸ್ವರೂಪವನ್ನು ಉಳಿಸಿಕೊಳ್ಳತಕ್ಕದ್ದು.

**43. ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ಕಂಪನಿಗಳನ್ನು ರಚಿಸುವುದು.**- (1) ಮಂಡಲಿಯು, ತನ್ನ ಯಾವುದೇ ಧ್ಯೇಯೋದ್ದೇಶವನ್ನು ಕಾರ್ಯಗತಗೊಳಿಸುವುದಕ್ಕಾಗಿ ಕೇಂದ್ರ ಸರ್ಕಾರದ ಪೂರ್ವಾನುಮೋದನೆಗೆ ಒಳಪಟ್ಟು, ತಾನಾಗಿಯೇ ಆಗಲಿ ಅಥವಾ ಅದರ ಯಾವುದೇ ಸಹಾಯಕ ಘಟಕ ಅಥವಾ ಯಾವುದೇ ಇತರ ಉದ್ಯಮದೊಂದಿಗೆ ಕೂಡಿ ಒಂದು ಅಥವಾ ಅದಕ್ಕಿಂತ ಹೆಚ್ಚು ಕಂಪನಿಗಳನ್ನು ರಚಿಸುವುದು ಅವಶ್ಯವೆಂದು ಪರ್ಯಾಲೋಚಿಸಿದರೆ ಅದು ಹಾಗೆ ಮಾಡಬಹುದು.

(2) (1)ನೇ ಉಪಪ್ರಕರಣದ ಅನುಸರಣೆಯಲ್ಲಿ ಯಾವುದೇ ಕಂಪನಿಯನ್ನು ರಚಿಸಲಾಗಿರುವಲ್ಲಿ,-

(ಎ) ಮಂಡಲಿಯು ತಾನಾಗಿಯೇ ಅಥವಾ ಅದರ ಸಹಾಯಕ ಘಟಕಗಳೊಂದಿಗೆ ರಚಿಸಿದ ಕಂಪನಿಯ ಸಂದರ್ಭದಲ್ಲಿ, ಅದು ಹಾಗೆ ರಚಿಸಿದ ಕಂಪನಿಯು ಸಮರ್ಥವಾಗಿ ಕಾರ್ಯನಿರ್ವಹಿಸಲು ಅಗತ್ಯವಾಗಬಹುದಾದಂಥ ಬಂಡವಾಳವನ್ನು ವಂತಿಗೆಯಾಗಿ ಕೊಡಬಹುದು, ಅಂಥ ಆಸ್ತಿಗಳನ್ನು ವರ್ಗಾವಣೆ ಮಾಡಬಹುದು ಅಥವಾ ಅಂಥ ಸಹಾಯವನ್ನು ಸಲ್ಲಿಸಬಹುದು; ಮತ್ತು

(ಬಿ) ಯಾವುದೇ ಇತರ ಸಂದರ್ಭದಲ್ಲಿ, ಈ ಬಗ್ಗೆ ಕೇಂದ್ರ ಸರ್ಕಾರದ ನಿರ್ದಿಷ್ಟ ಪೂರ್ವಾನುಮೋದನೆಗೆ ಒಳಪಟ್ಟು, ಮಂಡಲಿಯು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಮತ್ತು ಅಷ್ಟರಮಟ್ಟಿಗೆ ಬಂಡವಾಳವನ್ನು ವಂತಿಗೆಯಾಗಿ ಕೊಡಬಹುದು, ಆಸ್ತಿಗಳನ್ನು ವರ್ಗಾವಣೆ ಮಾಡಬಹುದು ಅಥವಾ ಸಹಾಯವನ್ನು ಒದಗಿಸಬಹುದು.

**44.** [2002ರ 20ನೇ ಸಂಖ್ಯೆಯ ಅಧಿನಿಯಮದ 162ನೇ ಪ್ರಕರಣದ ಮೂಲಕ ದಿನಾಂಕ: 1ನೇ ಏಪ್ರಿಲ್ 2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.]

**45. ವಿವರ ಪಟ್ಟಿಕೆಗಳು.-** ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯು, ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಅಗತ್ಯಪಡಿಸಬಹುದಾದಂಥ ವಿವರಪಟ್ಟಿಕೆಗಳನ್ನು ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

**46. ಸೇವಾವಿಷಯಗಳಿಗೆ ಸಂಬಂಧಪಟ್ಟಂತೆ ಪೂರ್ವಾನ್ವಯವಾಗಿ ಯೋಜನೆಗಳನ್ನು ಮತ್ತು ವಿನಿಯಮಗಳನ್ನು ರಚಿಸಲು ಅಧಿಕಾರ.-** ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಅಧಿಕಾರಿಗಳ ಅಥವಾ ಇತರ ನೌಕರರ ಸೇವಾ ಷರತ್ತುಗಳು ಅಥವಾ ಅಂಥವೇ ವಿಷಯಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ಯೋಜನೆ ಅಥವಾ ವಿನಿಯಮವನ್ನು ಗೊತ್ತುಪಡಿಸಿದ ದಿವಸಕ್ಕಿಂತ ಮುಂಚಿನದಲ್ಲದ ಯಾವುದೇ ದಿನಾಂಕದಿಂದ ಪೂರ್ವಾನ್ವಯವಾಗಿ ರಚಿಸಬಹುದು.

**47. ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು.-** ಈ ಅಧಿನಿಯಮದ ಉಪಬಂಧಗಳು, ಕಂಪನಿ ಅಧಿನಿಯಮ, ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಇತರ ಯಾವುದೇ ಕಾನೂನಿನ ಕಾರಣದಿಂದಾಗಿ ಪರಿಣಾಮವನ್ನು ಹೊಂದಿರುವ ಯಾವುದೇ ಲಿಖಿತದಲ್ಲಿ ಅಥವಾ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ಡಿಕ್ರಿ ಅಥವಾ ಆದೇಶದಲ್ಲಿ, ಅದಕ್ಕೆ ಅಸಂಗತವಾದುದು ಏನೇ ಅಡಕವಾಗಿದ್ದಾಗ್ಯೂ, ಪರಿಣಾಮವನ್ನು ಹೊಂದಿರತಕ್ಕದ್ದು.

**48. ವಿನಿಯಮ ರಚನಾಧಿಕಾರ.-** (1) ಮಂಡಲಿಯು, ಭಾರತದ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಯಾವ ವಿಷಯಕ್ಕಾಗಿ ಉಪಬಂಧವು ಅವಶ್ಯವಾಗಿರುವುದೋ ಅಥವಾ ವಿಹಿತವಾಗಿರುವುದೋ ಆ ಎಲ್ಲಾ ವಿಷಯಗಳಿಗಾಗಿ ಉಪಬಂಧಿಸಲು ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ಯೋಜನೆಗಳ ಉಪಬಂಧಗಳಿಗೆ ಅಸಂಗತವಾಗಿಲ್ಲದೆ ಇರುವ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) ಮಂಡಲಿಯ ಸಭೆಗಳಲ್ಲಿ ವ್ಯವಹಾರವನ್ನು ನಡೆಸುವುದಕ್ಕಾಗಿ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಸಭೆಯಲ್ಲಿ ಕೋರಂ ಆಗುವಂಥ ಸದಸ್ಯರ ಸಂಖ್ಯೆ;

(ಬಿ) ಅಧ್ಯಕ್ಷ ಮತ್ತು ಪೂರ್ಣಕಾಲಿಕ ನಿರ್ದೇಶಕರನ್ನು ಹೊರತುಪಡಿಸಿ, ಯಾವುದೇ ವ್ಯವಸ್ಥಾಪನಾ ಸಮಿತಿಯ ಸದಸ್ಯರಿಗೆ, ವ್ಯವಸ್ಥಾಪನಾ ಸಮಿತಿಯ ಸಭೆಗಳಿಗೆ ಹಾಜರಾಗುವುದಕ್ಕಾಗಿ

ಅಥವಾ 13ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಯಾವುದೇ ಇತರ ಕೆಲಸಕ್ಕೆ ಮತ್ತು ಆ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವ್ಯವಸ್ಥಾಪನಾ ಸಮಿತಿಯ ವ್ಯವಹರಣೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನು ನೋಡಿಕೊಳ್ಳುವುದಕ್ಕಾಗಿ ಸಂದಾಯ ಮಾಡಬೇಕಾದ ಭತ್ಯೆಗಳು;

(ಸಿ) 15ನೇ ಪ್ರಕರಣದ (ಎ) ಖಂಡದ ಉದ್ದೇಶಗಳಿಗಾಗಿ ಹೆಚ್ಚಿನ ಶ್ರೇಣಿ;

(ಡಿ) 22ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದಂತೆ ಅಧಿಕಾರಿಗಳು ಮತ್ತು ಇತರ ನೌಕರರು ಅಥವಾ ಅವರ ಕುಟುಂಬಗಳ ಆರೋಗ್ಯ, ಶಿಕ್ಷಣ ಅಥವಾ ಇತರ ಹಿತಾಸಕ್ತಿಗಳ ಅಭಿವೃದ್ಧಿಗಾಗಿ ಇರುವ ಕ್ರಮಗಳ ವಿವರಗಳು;

(ಇ) 22ನೇ ಪ್ರಕರಣದ (5)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನಿಧಿಗಳ ಸ್ಥಾಪನೆ ಅಥವಾ ಅವುಗಳ ನಿರ್ವಹಣೆಗೆ ಸಂಬಂಧಿಸಿದ ವಿವರಗಳ ವಿಷಯಗಳು ;

(ಎಫ್) 26ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವ ಷರತ್ತುಗಳಿಗೆ ಒಳಪಟ್ಟು ಹಣದ ಮೊತ್ತಗಳನ್ನು ಠೇವಣಿ ಇಡಬೇಕೋ ಆ ಷರತ್ತುಗಳು;

(ಜಿ) 27ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ಆಯವ್ಯಯ ಪಟ್ಟಿ ಮತ್ತು ಲೆಕ್ಕಪತ್ರಗಳನ್ನು ಸಿದ್ಧಪಡಿಸತಕ್ಕ ನಮೂನೆ ಮತ್ತು ರೀತಿ;

(ಎಚ್) 31ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಮತ್ತು ಆ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅದರ ವಿಲೇವಾರಿ ಮಾಡುವ ಕಾರ್ಯವಿಧಾನ ;

(ಐ) ಅಧಿಕಾರಿಗಳು ಮತ್ತು ಇತರ ನೌಕರರ ಸೇವಾ ಷರತ್ತುಗಳು;

(ಜೆ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**49. ತೊಂದರೆಗಳನ್ನು ನಿವಾರಿಸುವ ಅಧಿಕಾರ.**- (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯವೆಂದು ಕಂಡುಬರಬಹುದಾದ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

ಪರಂತು, ಯಾವುದೇ ಅಂಥ ಆದೇಶವನ್ನು ಗೊತ್ತುಪಡಿಸಿದ ದಿವಸದಿಂದ ಐದು ವರ್ಷಗಳು ಗತಿಸಿದ ತರುವಾಯ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೇ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**50. ಯೋಜನೆಗಳು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.**- ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ಯೋಜನೆಯನ್ನು ಮತ್ತು ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಗಾಗಿ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ನಿರಂತರವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ಯೋಜನೆಯಲ್ಲಿ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಯೋಜನೆಯನ್ನು ಅಥವಾ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ಯೋಜನೆಯು ಅಥವಾ ಸಂದರ್ಭಾನುಸಾರ ವಿನಿಯಮವು ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ,

ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ಯೋಜನೆ ಅಥವಾ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**ಅನುಸೂಚಿ**

**[35 (2)ನೇ ಪ್ರಕರಣವನ್ನು ನೋಡಿ]**

**ಏಕನಿಷ್ಠೆ ಮತ್ತು ರಹಸ್ಯದ ಬಗ್ಗೆ ಘೋಷಣೆ**

................. ಆದ ನಾನು, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ (ಸಂದರ್ಭಾನುಸಾರ) ಅಧ್ಯಕ್ಷ, ನಿರ್ದೇಶಕ, ಸಮಿತಿಯ ಸದಸ್ಯ, ಲೆಕ್ಕಪರಿಶೋಧಕ, ಅಧಿಕಾರಿ ಅಥವಾ ಇತರ ನೌಕರನಾಗಿ ಅಗತ್ಯವಾಗಿ ಮಾಡತಕ್ಕ ಮತ್ತು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ನಾನು ಧಾರಣ ಮಾಡಿರುವ ಪದಕ್ಕೆ ಅಥವಾ ಸ್ಥಾನಕ್ಕೆ ಯುಕ್ತವಾಗಿ ಸಂಬಂಧಪಡುವಂಥ ಕರ್ತವ್ಯಗಳನ್ನು ವಿಶ್ವಾಸಪೂರ್ವಕವಾಗಿ, ಪ್ರಾಮಾಣಿಕವಾಗಿ ಮತ್ತು ನನ್ನ ಕೌಶಲ್ಯ ಮತ್ತು ಸಾಮರ್ಥ್ಯವಿರುವಷ್ಟರ ಮಟ್ಟಿಗೆ ನಿರ್ವಹಿಸುತ್ತೇನೆ ಮತ್ತು ನೆರವೇರಿಸುತ್ತೇನೆಂದು ಈ ಮೂಲಕ ಘೋಷಿಸುತ್ತೇನೆ.

ಇದಲ್ಲದೆ ನಾನು, ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯೊಂದಿಗೆ ಯಾವುದೇ ವ್ಯವಹಾರವನ್ನು ಹೊಂದಿರುವ ಯಾರೇ ವ್ಯಕ್ತಿಯ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಮಾಹಿತಿಗೆ ಅದಕ್ಕೆ ಕಾನೂನು ಸಮ್ಮತವಾಗಿ ಹಕ್ಕುಳ್ಳವನಾಗಿಲ್ಲದ ಯಾರೇ ವ್ಯಕ್ತಿಗೆ ಅದನ್ನು ತಿಳಿಸುವುದಿಲ್ಲ ಅಥವಾ ತಿಳಿಸಲು ಅವಕಾಶ ಕೊಡುವುದಿಲ್ಲ ಮತ್ತು ನಾನು ಯಾರೇ ಅಂಥ ವ್ಯಕ್ತಿಗೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಗೆ ಸೇರಿದ ಅಥವಾ ಅದರ ಸ್ವಾಧೀನದಲ್ಲಿರುವ ಮತ್ತು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯ ವ್ಯವಹಾರಕ್ಕೆ ಅಥವಾ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಲಿಯೊಂದಿಗೆ ಯಾವುದೇ ವ್ಯವಹಾರವನ್ನು ಹೊಂದಿರುವ ಯಾರೇ ವ್ಯಕ್ತಿಯ ವ್ಯವಹಾರಕ್ಕೆ ಸಂಬಂಧಪಟ್ಟ ಯಾವುವೇ ಪುಸ್ತಕಗಳು ಅಥವಾ ದಸ್ತಾವೇಜುಗಳನ್ನು ಪರಿಶೀಲಿಸಲು ಅಥವಾ ನೋಡಲು ಅವಕಾಶ ಕೊಡುವುದಿಲ್ಲವೆಂದು ಘೋಷಿಸುತ್ತೇನೆ.

**ಎಸ್. ರಾಮಯ್ಯ,**

ಭಾರತ ಸರ್ಕಾರದ ಕಾರ್ಯದರ್ಶಿ.

* * *